# 2:1-7

# ಕ್ರಿಸ್ತನು, ಜ್ಞಾನ ಮತ್ತು ತಿಳುವಳಿಕೆಯ ಮೂಲನು

2:1-7ರಲ್ಲಿ ಅವರು ಪ್ರೋತ್ಸಾಹಿಸಲ್ಪಟ್ಟವರಾಗಬೇಕು ಮತ್ತು ಪ್ರೀತಿಯಿಂದ ಒಟ್ಟಾಗಿ ಇರುವವರಾಗಿ, ದೇವರ ಜ್ಞಾನವನ್ನು ಪೂರ್ಣವಾಗಿ ಪಡೆದುಕೊಂಡು ಇರಬೇಕೆಂಬದಾಗಿ ಕೊಲೊಸ್ಸೆಯವರ ವಿಷಯದಲ್ಲಿ ತನ್ನ ಬಯಕೆಯಾಗಿದೆ ಎಂದು ಪೌಲನು ಅವರಿಗೆ ತಿಳಿಸುತ್ತಾನೆ. ಅವರಿಗೆ ಅಗತ್ಯವಿರುವ ಎಲ್ಲಾ ಆತ್ಮೀಕ ಮಾಹಿತಿಯು ಕ್ರಿಸ್ತನಲ್ಲಿಯೇ ಸಿಕ್ಕಬಹುದಾಗಿದೆ. ಆದುದರಿಂದ, ಅವರು ಆತನನ್ನು ಹಿಂಬಾಲಿಸತಕ್ಕದ್ದು ಮತ್ತು ಆತನಿಗೆ ಅವರು ಹೊಂದಿರುವ ನಂಬಿಗಸ್ತಿಕೆಯನ್ನು ಬಿಟ್ಟು ದೂರಕ್ಕೆ ಸೆಳೆಯಲ್ಪಡಕೂಡದಾಗಿತ್ತು.

## ಪೌಲನ ಅಪೇಕ್ಷೆ: ಅವರು ದೇವರ ಮರ್ಮದ ಬಗ್ಗೆ ಪೂರ್ಣ ತಿಳುವಳಿಕೆ ಹೊಂದಬೇಕೆಂಬದೆ (2:1-3)

**[1]ನಿಮಗೋಸ್ಕರವೂ ಲವೊದಿಕೀಯದವರಿಗೋಸ್ಕರವೂ ನನ್ನನ್ನು ಕಣ್ಣಾರೆ ಕಾಣದಿರುವವರೆಲ್ಲರಿಗೋಸ್ಕರವೂ ನನಗೆ ಬಹಳ ಹೋರಾಟ ಉಂಟೆಂಬುದು ನಿಮಗೆ ತಿಳಿದಿರಬೇಕೆಂದು ಅಪೇಕ್ಷಿಸುತ್ತೇನೆ. [2-3]ಹೇಗಂದರೆ ನೀವೆಲ್ಲರು ಪ್ರೀತಿಯಿಂದ ಹೊಂದಿಕೆಯಾಗಿದ್ದು ಬುದ್ಧಿಪೂರ್ವಕ ನಿಶ್ಚಯವೆಂಬ ಭಾಗ್ಯವನ್ನು ಪಡೆದು ದೇವರು ತಿಳಿಸಿರುವ ಮರ್ಮವನ್ನು ಅಂದರೆ ತನ್ನಲ್ಲೇ ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳನ್ನೆಲ್ಲಾ ಅಡಗಿಸಿಕೊಂಡಿರುವ ಕ್ರಿಸ್ತನನ್ನು ತಿಳುಕೊಂಡವರಾಗಿ . . .**

### "ನಿಮಗೋಸ್ಕರವೂ . . . ನನಗೆ ಬಹಳ ಹೋರಾಟ ಉಂಟೆಂಬುದು ನಿಮಗೆ ತಿಳಿದಿರಬೇಕೆಂದು ಅಪೇಕ್ಷಿಸುತ್ತೇನೆ" (2:1)

ಪೌಲನು ಈ ಹಂತದಲ್ಲಿ ತನ್ನ ವಿಚಾರಧಾರೆಯನ್ನು ಬಿಟ್ಟು ಬೇರೆ ಅಂಶವೊಂದಕ್ಕೆ ಹೋಗುತ್ತಿಲ್ಲ ಎಂಬ ವಾಸ್ತವಾಂಶವು ಆತನು ಬಳಸುವ **ಆದ್ದರಿಂದ** (*γάρ*, *gar*) ಎಂಬದರಲ್ಲಿ ಸ್ಪಷ್ಟವಾಗಿ ತೋರುತ್ತದೆ, ಅದರರ್ಥವು "ವಿವರಿಸುವ ವಿಧದಿಂದ." 1:28ರಲ್ಲಿ ಆತನು "ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ (ಸಂಪೂರ್ಣರನ್ನಾಗಿ) ನಿಲ್ಲಿಸುವದು" ತನ್ನ ಗುರಿಯೆಂಬದಾಗಿ ಹೇಳಿದ್ದನು. ಕೊಲೊಸ್ಸೆಯವರು ಮತ್ತು ಇತರರು ತಮ್ಮ ಜೀವಿತಗಳಲ್ಲಿ

2:2ರಲ್ಲಿನ ಗುಣಗಳನ್ನು ಬೆಳೆಸಿಕೊಂಡಲ್ಲಿ ಇದು ಸಾಧ್ಯವಾಗಲಿತ್ತು. ಅವರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವ ಗುರಿಯಲ್ಲಿನ ತನ್ನ ಪಾತ್ರದ ಕಾರಣದಿಂದಾಗಿ, ಆತನು ಅವರ ಪರವಾಗಿ ಮತ್ತು ಲವೊದಿಕೀಯ ಹಾಗೂ ಬೇರೆಡೆಯಲ್ಲಿರುವ ಕ್ರೈಸ್ತರ ಪರವಾಗಿಯೂ ಬಹಳ ಹೋರಾಟವನ್ನು ಹೊಂದಿದ್ದನು. 1:28ರಿಂದ 2:1ರ ವರೆಗಿನ ವಚನಗಳನ್ನು ತುಲನೆ ಮಾಡುವದಾದರೆ ಅವುಗಳ ನಡುವಿನ ಸಂಬಂಧವು ಸ್ಪಷ್ಟಗೊಳ್ಳುತ್ತದೆ.

**ಹೋರಾಟ** (*ἀγών*, *agōn*)[1] ಎಂಬ ಪದದ ಅರ್ಥವು ತೀವ್ರವಾದ ಮತ್ತು ಸ್ಥಿರವಾದ ಪ್ರಯಾಸದಲ್ಲಿ ವ್ಯಕ್ತವಾಗುವ ಸಮರ್ಪಣೆ ಎಂದಾಗಿದೆ. 1:29ರಲ್ಲಿ "ಹೋರಾಡುತ್ತೇನೆ" ಎಂಬ ಪದವು ಸಹ ಒಂದೇ ಮೂಲ ಪದದಿಂದ ಬಂದದ್ದಾಗಿದೆ, ಅದು ಕೆಲವು ಸಾರಿ ಮಲ್ಲರಂಗದಲ್ಲಿರುವವರು ಹೊರಹಾಕುವಂಥ ಶ್ರಮಕ್ಕೆ ಸಂಬಂಧಪಟ್ಟಿರುತ್ತದೆ. ಪೌಲನು ಎಷ್ಟು ಅತ್ಯಾಸಕ್ತಿಯಿಂದ ತನ್ನ ಜೊತೆ ಕ್ರೈಸ್ತರ ಹಿತವನ್ನು ಅಪೇಕ್ಷಿಸಿದನೆಂಬುದನ್ನು ಇದು ದೃಷ್ಟಾಂತಪಡಿಸುತ್ತದೆ.

### "ಲವೊದಿಕೀಯದವರಿಗೋಸ್ಕರವೂ" (2:1)

ಪೌಲನ ಪತ್ರಿಕೆಗಳಲ್ಲಿ ಬಲವಾದ ಭಾವಗಳು ವ್ಯಕ್ತಪಡಿಸಲ್ಪಟ್ಟಿರುತ್ತವೆ.[2] ಪೌಲನ ಒಬ್ಬ ಸಂವೇದಿಯಲ್ಲದವನು, ಸೂಕ್ಷ್ಮ ಮನಸ್ಸಿಲ್ಲದವನು, ಮತ್ತು ಇತರರ ಕಡೆಗೆ ಅಸಡ್ಡೆಯುಳ್ಳವನೆಂದು ಕಲ್ಪಿಸಿಕೊಳ್ಳುವವರು ಪೌಲನಿಗಿರುವ ಕನಿಕರದ ಇನ್ನೊಂದು ಮುಖದ ಬಗ್ಗೆ ಸಂಪೂರ್ಣ ಅಪಾರ್ಥಮಾಡಿಕೊಂಡವರಾಗಿದ್ದಾರೆ. ಅದೇ ರೀತಿಯಲ್ಲಿಯೇ, ಪೌಲನನ್ನು ಎಂದಿಗೂ ಭೇಟಿಯಾಗಿರದಿದ್ದ ಕ್ರೈಸ್ತರಿಗೆ ಪೌಲನು ಅವರ ಬಗ್ಗೆ ಮತ್ತು ಅವರ ಆತ್ಮೀಕ ಅಗತ್ಯತೆಗಳ ಬಗ್ಗೆ ಎಷ್ಟೊಂದು ಆಳವಾದ ಭಾವ ಹೊಂದಿದ್ದನು ಎಂಬುದನ್ನು ಗ್ರಹಿಸಿಕೊಳ್ಳದೆ ಇದ್ದಿರಬಹುದಾಗಿದೆ. ಆತನು ಅವರ ಆತ್ಮೀಕ ಹಿತದ ಬಗ್ಗೆ ಹೊಂದಿರುವ ಆಸಕ್ತಿಯು ಎಷ್ಟು ತೀವ್ರವಾದದ್ದು ಎಂಬುದನ್ನು ಅವರಿಗೆ ತೋರಿಸಲು ತನ್ನ ಇನ್ನೊಂದು ಮುಖವನ್ನು ಬಯಲುಪಡಿಸುತ್ತಾನೆ.

ಪೌಲನು ತನ್ನ ಸೇವೆಯ ಕಡೆಗೆ ಯಾವ ದೋರಣೆಯನ್ನು ಹೊಂದಿದ್ದನು? ಆತನು ತನಗೆ ಸಾಧ್ಯವಾದ ಎಲ್ಲರನ್ನೂ (ರೋಮಾ 1:14, 15) – ತಾನು ಭೇಟಿಯೇ ಆಗಿರದ ಆದರೆ ತನ್ನ ಪತ್ರಿಕೆಗಳಿಂದ ಬೋಧನೆಯನ್ನು ನೀಡಿದವರನ್ನು ಸಹ – ಸಂಧಿಸಬೇಕೆಂಬ ಧ್ಯೇಯ ಹೊಂದಿದ್ದನು. ಆತನು ಹೀಗೆ ಬರೆದನು, "ಸಾರಲೇ ಬೇಕೆಂಬ ನಿರ್ಬಂಧ ನನಗುಂಟು. ಸಾರದಿದ್ದರೆ ನನ್ನ ಗತಿಯನ್ನು ಏನು ಹೇಳಲಿ" (1 ಕೊರಿಂಥ 9:16).

ಪೌಲನು ಲವೊದಿಕೀಯದಲ್ಲಿರುವ[3] ಸಭೆಯ ಕುರಿತು ಕಾಳಜಿ ಹೊಂದಿದ್ದನು, ಅದು ಕೊಲೊಸ್ಸೆಯಿಂದ ಸುಮಾರು 12 ಹನ್ನೆರಡು ಮೈಲುಗಳಷ್ಟು ದೂರದಲ್ಲಿತ್ತು. ಹಲವಾರು ವರ್ಷಗಳ ಬಳಿಕ, ಈ ಸಭೆಯು ಒಂದು ತಣ್ಣಗೂ ಅಲ್ಲದ ಬೆಚ್ಚಗೂ ಅಲ್ಲದ, ಭೌತಿಕವಾಗಿ ಐಶ್ವರ್ಯವಂತವಾದ ಆದರೆ ಆತ್ಮೀಕವಾಗಿ ಬಡತನವುಳ್ಳಂಥ ಸಭೆ ಎಂಬದಾಗೊ ಬಣ್ಣಿಸಲ್ಪಟ್ಟಿತ್ತು (ಪ್ರಕಟನೆ 3:14-22). ಅವರ ಪರಿಸ್ಥಿತಿ ಹೇಗಿತ್ತೆಂದರೆ, ಸಾಂಕೇತಿಕವಾಗಿ ಹೇಳುವದಾದರೆ, ಯೇಸು ಅವರನ್ನು ತನ್ನ ಬಾಯೊಳಗಿಂದ ಕಾರುವದಕ್ಕೆ ಸಿದ್ಧನಿದ್ದನು.

### "ನನ್ನನ್ನು ಕಣ್ಣಾರೆ ಕಾಣದಿರುವವರೆಲ್ಲರಿಗೋಸ್ಕರವೂ" (2:1)

ಕೊಲೊಸ್ಸೆಯಲ್ಲಿರುವ ಕ್ರೈಸ್ತರಲ್ಲಿ ಯಾರೊಬ್ಬರೂ ಆತನನ್ನು ಕಂಡಿರಲಿಲ್ಲ ಎಂಬರ್ಥದಲ್ಲಿ

ಪೌಲನು ಹೇಳಲಿಲ್ಲ. ಆತನು ಮೂರು ಗುಂಪು ಜನರನ್ನು ಉದ್ದೇಶಿಸಿ ಮಾತಾಡುತ್ತಿದ್ದಾನೆ. ಆತನು "ನಿಮಗೋಸ್ಕರವೂ" ಎಂದನು, ಅಂದರೆ ಕೊಲೊಸ್ಸೆಯಲ್ಲಿರುವ ಕ್ರೈಸ್ತರು; "ಲವೊದಿಕೀಯದವರಿಗೋಸ್ಕರವೂ"; ಮತ್ತು "[ಆತನನ್ನು] ಕಣ್ಣಾರೆ ಕಾಣದಿರುವವರೆಲ್ಲರಿಗೋಸ್ಕರವೂ ನನಗೆ ಬಹಳ ಹೋರಾಟ ಉಂಟು" ಎಂದು ಹೇಳಿದನು. ಮೂರನೆಯ ಗುಂಪಿನಲ್ಲಿ ಮೊದಲ ಎರಡು ಗುಂಪುಗಳಲ್ಲಿನ ಕೆಲವರು ಮಾತ್ರವಲ್ಲದೆ ಪೌಲನನ್ನು ಎಂದಿಗೂ ಭೇಟಿಯಾಗಿರದವರು ಸಹ ಸೇರಿರುತ್ತಾರೆ. ಇದು ನಿಜವಾಗಿದ್ದಲ್ಲಿ, ಲೈಕಸ್ ಕಣಿವೆಯಲ್ಲಿ ಕೆಲವರಷ್ಟೆ ಆತನನ್ನು ನೋಡಿದವರಾಗಿದ್ದರೆ, ಬಹುಪಾಲು ಜನರು ಆತನನ್ನು ಕಂಡಿರಲಿಲ್ಲ ಎಂದಾಗುತ್ತದೆ.

ಕಣ್ಣಾರೆ ಎಂಬುದು ಗ್ರೀಕ್.ನ μου ἐν σαρκί (*mou en sarki*, ಅಕ್ಷರಶಃ, "ನನ್ನ ಶರೀರದಲ್ಲಿ") ಪದಗುಚ್ಛದಿಂದ ಅನುವಾದಿಸಲ್ಪಟ್ಟಿರುತ್ತದೆ, ಅದರರ್ಥವು ಆತನನ್ನು "ಶರೀರದಲ್ಲಿ" ಕಾಣದವರೆಲ್ಲರು ಎಂಬದು. ಆತನು ಆತನ ಬಗ್ಗೆ ಕೇವಲ ಕೇಳಿಸಿಕೊಂಡಿದ್ದವರ ಮತ್ತು ಆತನನ್ನು ವಾಸ್ತವಿಕದಲ್ಲಿ ಭೇಟಿಯಾಗಿದ್ದವರ ನಡುವೆ ವಿರುದ್ಧ ಹೋಲಿಕೆ ಮಾಡುತ್ತಿದ್ದಾನೆ.

### "ಅವರ ಹೃದಯಗಳು ಪ್ರೋತ್ಸಾಹಗೊಳ್ಳಲಿ ಎಂದು" (2:2, 3)

ಪೌಲನ ತೀವ್ರವಾದ ಪ್ರಯಾಸವು ಇತರರನ್ನು ಆತ್ಮೀಕವಾಗಿ ಅಭಿವೃದ್ಧಿಗೊಳಿಸುವದರ ಕಡೆಗೆ ಆಗಿತ್ತು. ಆತನ ಕಾಳಜಿಯು ಅವರ ಶಾರೀರಿಕ ಹಿತಾಸಕ್ತಿಗಿಂತಲೂ ಅವರ ಹೃದಯಗಳ ಹಿತದ ಬಗ್ಗೆಯೇ ಅಧಿಕವಾಗಿತ್ತು. **ಹೃದಯಗಳು** καρδίαι (*kardiai*) ಎಂಬುದು ಬೈಬಲಿನಲ್ಲಿ ಒಬ್ಬ ವ್ಯಕ್ತಿಯ ಆಂತರ್ಯದ ಕೇಂದ್ರಸ್ಥಾನವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ. ಬೈಬಲಿನಲ್ಲಿ ಕೇವಲ ಒಂದೇ ಒಂದು ಕಡೆಯಲ್ಲಿ ಅದು ರಕ್ತವನ್ನು ಪಂಪ್ ಮಾಡುವ ಶಾರೀರಿಕ ಹೃದಯ ಎಂಬ ಅರ್ಥದಲ್ಲಿ ಬಳಸಲ್ಪಟ್ಟಿದೆ (2 ಸಮುವೇಲ 18:14; LXX). ಒಬ್ಬ ವ್ಯಕ್ತಿಯ ಆಂತರ್ಯವನ್ನು ಸೂಚಿಸುವದರ ಜೊತೆಗೆ, ಅದು ಭೌತಿಕ ಕೇಂದ್ರಸ್ಥಾನವನ್ನು, ಉದಾಹರಣೆಗೆ, "ಭೂಗರ್ಭ" ಎಂಬದನ್ನು ಸಹ ಸೂಚಿಸಬಹುದಾಗಿದೆ (ಮತ್ತಾಯ 12:40).

ಹೊಸ ಒಡಂಬಡಿಕೆಯಲ್ಲಿ ಮಾನವ "ಹೃದಯ"ವನ್ನು ಸೂಚಿಸುವ ವೇಳೆಯಲ್ಲಿ, ಒಬ್ಬನು ಯಾವದರ ಮೂಲಕ ಯೋಚಿಸುತ್ತಾನೋ (ಮತ್ತಾಯ 9:4), ಅರ್ಥಮಾಡಿಕೊಳ್ಳುತ್ತಾನೋ (ಮತ್ತಾಯ 13:15), ತರ್ಕಿಸುತ್ತಾನೋ (ಮಾರ್ಕ 2:6). ಸಂಶಯಿಸುತ್ತಾನೋ (ಮಾರ್ಕ 11:23), ಕಲ್ಪಿಸಿಕೊಳ್ಳುತ್ತಾನೋ (ಲೂಕ 1:51), ಮನಸ್ಸಲ್ಲಿ ಯೋಚಿಸಿಕೊಳ್ಳುತ್ತಾನೋ (ಲೂಕ 2:19), ಚಕಿತಗೊಳ್ಳುತ್ತಾನೋ (ಲೂಕ 3:15), ದುರಾಶೆ ಪಡುತ್ತಾನೋ (ರೋಮಾ 1:24), ನಂಬುತ್ತಾನೋ (ರೋಮಾ 10:10), ಮೋಸ ಪಡಿಸಲ್ಪಡುತ್ತಾನೋ (ರೋಮಾ 16:18), ಮತ್ತು ದೋಷಿಯೆಂದು ನಿರ್ಣಯಿಸುತ್ತಾನೋ (1 ಯೋಹಾನ 3:21) ಆ ಬುದ್ಧಿಯ, ಮಾನಸಿಕ, ಮತ್ತು ಆತ್ಮೀಕ ಕೇಂದ್ರವನ್ನು ಸೂಚಿಸಿ *kardia* ಎಂಬ ಪದವು ಬಳಸಲ್ಪಟ್ಟಿದೆ. ಅದರಲ್ಲಿ ಭಾವಗಳು ಸೇರಿರಬಹುದಾಗಿದೆ, ಅದು ಒಬ್ಬ ವ್ಯಕ್ತಿಯ ಪ್ರೀತಿಸುವ (ಮತ್ತಾಯ 22:37), ನೋಯಿಸುವ (ಮಾರ್ಕ 3:5), ಕಳವಳಗೊಳ್ಳುವ (ಯೋಹಾನ 14:1), ದುಃಖಗೊಳ್ಳುವ (ಯೋಹಾನ 16:6), ಸಂತೋಷಿಸುವ (ಅಪೊಸ್ತಲರ ಕೃತ್ಯಗಳು 2:26), ಯಾತನೆಗೊಳ್ಳುವ (2 ಕೊರಿಂಥ 2:4), ಮತ್ತು ಪ್ರೋತ್ಸಾಹಪಡಿಸಲ್ಪಡುವ (ಕೊಲೊಸ್ಸೆ 4:8) ಭಾಗವನ್ನು

ಸೂಚಿಸುವದಾಗಿದೆ. ಅದರೊಳಗೆ ಚಿತ್ತವು ಸೇರಿರುತ್ತದೆ, ಅದು ಸಂಕಲ್ಪ (ಅಪೊಸ್ತಲರ ಕೃತ್ಯಗಳು 11:23) ಮತ್ತು ಉದ್ದೇಶದ ಕೇಂದ್ರಸ್ಥಾನ (ಇಬ್ರಿಯ 4:12) ಆಗಿರುತ್ತದೆ.

ಪೌಲನು ಈ ಕ್ರೈಸ್ತರ ಜೀವಿತಗಳ ಕೇಂದ್ರಸ್ಥಾನಗಳಾದ, ಹೃದಯಗಳನ್ನು ಬಲಗೊಳಿಸಬೇಕೆಂದು ಬಯಸಿದನು. ಶಾರೀರಿಕ ಗುಣಗಳು ಪ್ರಾಮುಖ್ಯವಾದವುಗಳು, ಆದರೆ "ಒಳಗಣ ಭೂಷಣ"ವಾದ, ಆಂತರ್ಯದಷ್ಟು ಪ್ರಾಮುಖ್ಯವಾಗಿರುವದಿಲ್ಲ (1 ಪೇತ್ರ 3:4). ದೇವರು ಹೊರಗಿನ ತೋರಿಕೆಯನ್ನು ನೋಡುವ ಬದಲಾಗಿ ಹೃದಯವನ್ನೇ ನೋಡುವವನಾಗಿದ್ದಾನೆ.[4] ಸೊಲೊಮೋನನು ನೀಡುವ ಬುದ್ಧಿವಾದವು ಪ್ರಾಮುಖ್ಯವಾಗಿರುತ್ತದೆ: "ಹೃದಯವನ್ನು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು" (ಜ್ಞಾನೋಕ್ತಿ 4:23). ಮನುಷ್ಯನು ಶರೀರಕ್ಕೆ ಪ್ರಧಾನವಾಗಿರುವ, ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ಆದರೆ ಹೃದಯದ ಆತ್ಮೀಕ ಆಹಾರವಾದ, ದೇವರ ವಾಕ್ಯದಿಂದ ಬದುಕುವನು (ಮತ್ತಾಯ 4:4).

## "ನೀವೆಲ್ಲರು ಪ್ರೀತಿಯಿಂದ ಹೊಂದಿಕೆಯಾಗಿದ್ದು" (2:2, 3)

ಹೊಂದಿಕೆಯಾಗಿದ್ದು (συμβιβάζω, *sumbibazō*) ಎಂದು ಅನುವಾದಿಸಲ್ಪಟ್ಟಿರುವ ಪದದಲ್ಲಿ ಒಂದು ಅಂಶವನ್ನು ಸಿದ್ಧಾಂತಪಡಿಸಲು ಯೋಚನೆಗಳನ್ನು "ಒಂದಾಗಿ ಕೂಡಿಸುವದು" (ಅಪೊಸ್ತಲರ ಕೃತ್ಯಗಳು 9:22), ಒಂದು ಅಂತಿಮ ನಿರ್ಧಾರಕ್ಕೆ ಬರುವದು (ಅಪೊಸ್ತಲರ ಕೃತ್ಯಗಳು 16:10), ಒಂದು ಪಾಠವನ್ನು ಕಲಿಸುವದು (1 ಕೊರಿಂಥ 2:16), ಅಥವಾ ಜನರನ್ನು ಒಂದುಗೂಡಿಸುವದು (ಎಫೆಸ 4:16; ಕೊಲೊಸ್ಸೆ 2:2, 19) ಎಂಬಂತಹ ಭಾವನೆಗಳು ಸೇರಿರುತ್ತವೆ. ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಐದು ಸಾರಿ *agapē* ಎಂಬ ಪದವು ಪೌಲನಿಂದ ಉಲ್ಲೇಖಿಸಲ್ಪಟ್ಟಿದ್ದು, ಅದರಲ್ಲಿ ಇದುವರೆಗೆ ಇದು ನಾಲ್ಕನೆಯ ಸಾರಿಯಾಗಿರುತ್ತದೆ (ನೋಡಿರಿ 1:4, 8, 13 ["ಪ್ರಿಯ"]; 3:14).

ದಾವೀದನ ಮೇಲೆ ಯೋನಾತಾನನು ಇಟ್ಟಿದ್ದ ಪ್ರೀತಿಯು ಜನರನ್ನು ಒಂದಾಗಿ ಹೆಣೆಯುವ ಪ್ರೀತಿಗೆ ಒಂದು ಉದಾಹರಣೆಯಾಗಿದೆ (1 ಸಮುವೇಲ 18:1). ಕ್ರೈಸ್ತರು ಸಹ ದಾವೀದನು ಮತ್ತು ಯೋನಾತಾನರ ನಡುವೆ ಇದ್ದ ಅದೇ ಆಪ್ತತೆ ಮತ್ತು ಪರಸ್ಪರರ ಕಡೆಗೆ ಕಳಕಳಿಯನ್ನು ಹೊಂದಿರತಕ್ಕದ್ದು. ಐಕ್ಯತೆಯು ಸ್ಥಿರವಾಗಿ ಉಳಿಯುವ ಪ್ರೀತಿ ಮತ್ತು ನಿರಂತರವಾದ ವಿಶ್ವಾಸದ ಮೇಲೆ ಅವಲಂಭಿತವಾಗಿರುತ್ತದೆ.

ಒಂದು ಹಿಂಡು ಮತ್ತು ಒಬ್ಬನೇ ಕುರುಬನು ಇರಲಿದ್ದಾನೆ ಎಂದು ಯೇಸು ಕಲಿಸಿದನು (ಯೋಹಾನ 10:16). ಆತನು ಎಲ್ಲಾ ವಿಶ್ವಾಸಿಗಳಲ್ಲಿ ಐಕ್ಯತೆಯಿರಬೇಕೆಂದು ಪ್ರಾರ್ಥನೆ ಮಾಡಿದನು (ಯೋಹಾನ 17:20, 21). ಪೌಲನು ಕ್ರೈಸ್ತರಿಗೆ ನಿಮ್ಮೊಳಗೆ ಪಂಗಡಗಳಿರಬಾರದೆಂದು (1 ಕೊರಿಂಥ 1:10), ಆದರೆ ಪರಸ್ಪರರ ಕಡೆಗೆ ವಿನಯತೆ, ಸಾತ್ವಿಕತೆ, ದೀರ್ಘಶಾಂತಿ, ಪ್ರೀತಿ, ಒಬ್ಬರಿಗೊಬ್ಬರು ಸಹಿಸಿಕೊಳ್ಳುವಿಕೆಗಳ ಮೂಲಕ ಐಕ್ಯತೆಯನ್ನು ಕಾಪಾಡಿಕೊಳ್ಳಿರಿ ಎಂದು ಬುದ್ಧಿವಾದ ಹೇಳುತ್ತಾನೆ (ಎಫೆಸ 4:1-3). ದೇವರು "ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು; . . . ಕರ್ತನು ಒಬ್ಬನೇ, ಭರವಸವು ಒಂದೇ, ಸ್ನಾನದೀಕ್ಷೆಯು ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ" ಎಂದಾಗಿಸುವ ಮೂಲಕ ಐಕ್ಯತೆಯನ್ನು ಸಾಧ್ಯಗೊಳಿಸಿರುತ್ತಾನೆ (ಎಫೆಸ 4:4-6). ಮನುಷ್ಯ

ಸಂಪ್ರದಾಯಗಳನ್ನಾಗಲಿ ಮತ್ತು ಪ್ರಾಪಂಚಿಕ ಬಾಲಬೋಧೆಯಿಂದಾಗಲಿ ಐಕ್ಯತೆಯು ಬರುವದಿಲ್ಲ, ಯೇಸುವನ್ನು ಹಿಂಬಾಲಿಸುವದರಿಂದಲೇ ಬರುತ್ತದೆ (ಕೊಲೊಸ್ಸೆ 2:8). ಜನರು ಆತನ ಸಾರೂಪ್ಯವಳ್ಳವರಾಗುವದಕ್ಕೆ ಪ್ರವೀಣತೆಗೆ ಬಂದ ಹಾಗೆ ಕ್ರಿಸ್ತನು ಅವರನ್ನು ಒಂದುಗೂಡಿಸುತ್ತಾನೆ (ಎಫೆಸ 4:13).

ಎಲ್ಲಾ ನಂಬಿಗಸ್ತರಾದ ವಿಶ್ವಾಸಿಗಳಲ್ಲಿ ಐಕ್ಯತೆಯನ್ನುಂಟು ಮಾಡುವದೇ ಪ್ರತಿಯೊಬ್ಬ ಕ್ರೈಸ್ತರ ಗುರಿಯಾಗಿರತಕ್ಕದ್ದು. ನಾವು ಲೋಕದವರೊಂದಿಗೆ ಅಥವಾ ಕ್ರಿಸ್ತನಿಗೆ ಸಂಬಂಧಪಡದಂತಹ ಆಚಾರಗಳಲ್ಲಿ, ಮನೋಭಾವಗಳಲ್ಲಿ, ಮತ್ತು ನೈತಿಕತೆಗಳಲ್ಲಿ ತೊಡಗಿರುವವರ ಸಂಗಡ ನಾವು ಐಕ್ಯತೆಯನ್ನು ಅಪೇಕ್ಷಿಸಬಾರದು (ರೋಮಾ 16:17; 2 ಕೊರಿಂಥ 6:14-17).

## "ಬುದ್ಧಿಪೂರ್ವಕ ನಿಶ್ಚಯವೆಂಬ ಭಾಗ್ಯವನ್ನು ಪಡೆದು" (2:2, 3)

ಪೌಲನ ಪ್ರಕಾರವಾಗಿ, ನಿಜವಾದ ಭಾಗ್ಯವು ಹಣದಲ್ಲಾಗಲಿ ಅಥವಾ ಭೌತಿಕ ಮೌಲ್ಯದ ವಸ್ತುಗಳಲ್ಲಾಗಲಿ ಸಿಕ್ಕುವದಿಲ್ಲ. "ಭಾಗ್ಯ" (πλοῦτος, *ploutos*) ಎಂಬುದು 1:27ರಲ್ಲಿ ಸಹ ಉಲ್ಲೇಖಿಸಲ್ಪಟ್ಟಿದ್ದು, ಅದು **ಬುದ್ಧಿ** (σύνεσις, *sunesis*) ಯಲ್ಲಿ ಸಿಕ್ಕುತ್ತದೆ. ದೇವರು ಕೊಲೊಸ್ಸೆಯವರಿಗೆ ತಿಳುವಳಿಕೆಯನ್ನು ಅನುಗ್ರಹಿಸಬೇಕೆಂದು ಮತ್ತು ಅವರು ದೇವಜ್ಞಾನದಲ್ಲಿ ಅಭಿವೃದ್ಧಿಗೊಳ್ಳುವಂತಾಗಬೇಂಕೆಂದು ಪೌಲನು ಅವರಿಗೋಸ್ಕರ ಪ್ರಾರ್ಥಿಸಿದನು (ಕೊಲೊಸ್ಸೆ 1:9, 10). ಭೂಲೋಕದ ಐಶ್ವರ್ಯದ ಬದಲಾಗಿ, ಕ್ರೈಸ್ತರು ಪರಲೋಕದ ಐಶ್ವರ್ಯಗಳನ್ನು, ಆತ್ಮೀಕ ಬೊಕ್ಕಸಗಳನ್ನು, ಮತ್ತು ನಿತ್ಯವಾದ ಆಶೀರ್ವಾದಗಳನ್ನು ಹುಡುಕತಕ್ಕದ್ದು (ಮತ್ತಾಯ 6:20; 1 ತಿಮೊಥೆ 6:19).

ಅಜ್ಞಾನವು ಶಂಕೆಯನ್ನು ಹುಟ್ಟಿಸಬಹುದು, ಆದರೆ ಅದೇ ವೇಳೆಯಲ್ಲಿ ತಿಳುವಳಿಕೆಯು ಭರವಸೆಯನ್ನು ಕೊಡಬಲ್ಲದು. ದೇವರ ಪ್ರಕಟಗೊಂಡ ವಾಕ್ಯವು ಆತನ ಯೋಜನೆಗಳನ್ನು ಮತ್ತು ಉದ್ದೇಶಗಳನ್ನು ನಮಗೆ ತಿಳಿಯಪಡಿಸುತ್ತದೆ. ಆತನ ವಾಕ್ಯದ ಕುರಿತಾದ ಜ್ಞಾನವು ಕ್ರೈಸ್ತ ಜೀವಿತಕ್ಕೆ "ಇಹರಪಗಳಲ್ಲಿಯೂ ಜೀವವಾಗ್ದಾನ ಉಂಟು" ಎಂಬ ನಿಶ್ಚಯವನ್ನು ಒದಗಿಸುತ್ತದೆ (1 ತಿಮೊಥೆ 4:8). ಕ್ರೈಸ್ತರಿಗೆ ಕ್ರಿಸ್ತನಲ್ಲಿಟ್ಟಿರುವ ನಂಬಿಕೆಯ ಮೌಲ್ಯದ ಬಗ್ಗೆ ಭರವಸೆಯಿಂದ ಇರಬಹುದಾಗಿದೆ. ಯೇಸುವಿನ ಬೋಧನೆಗಳಲ್ಲಿ ಸಿಕ್ಕುವ ಸಂಪತ್ತುಗಳು ನಮ್ಮನ್ನು ಪ್ರೀತಿಯ ಮೂಲಕ ಒಂದಗೂಡಿಸಬಲ್ಲವು ಮತ್ತು ದೇವರ ಮನಸ್ಸನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯವನ್ನು ಒದಗಿಸಬಲ್ಲವು.

ಅಷ್ಟು ಮಾತ್ರವಲ್ಲದೆ, "ಅಜ್ಞಾನದ" ಕತ್ತಲೆಯಲ್ಲಿರುವವರು ರಕ್ಷಿಸಲ್ಪಡದ ಸ್ಥಿತಿಯಲ್ಲಿಯೇ ಉಳಿಯುತ್ತಾರೆ (ರೋಮಾ 10:1-3). ಅವರು ದೇವರ ಜೀವದಿಂದ ಹೊರಗಿಡಲ್ಪಟ್ಟವರಾಗಿರುತ್ತಾರೆ (ಎಫೆಸ 4:17, 18). ಒಬ್ಬ ವ್ಯಕ್ತಿಯು ದೇವರ ಸಂಗಡ ಹೊಂದಿರುವ ಸಂಬಂಧದಲ್ಲಿ ತಿಳುವಳಿಕೆಯು ಸಾರಭೂತವಾದದ್ದು.

## "ದೇವರು ತಿಳಿಸಿರುವ ಮರ್ಮವನ್ನು ಅಂದರೆ . . . ಕ್ರಿಸ್ತನನ್ನು" (2:2, 3)

ಕ್ರೈಸ್ತರಿಗೆ ಒಂದು ತಿಳುವಳಿಕೆಯ ಮಟ್ಟದ ಅಗತ್ಯವಿರುತ್ತದೆ. ಮರ್ಮದ **ನಿಜ ತಿಳುವಳಿಕೆ** – ಯೇಸು ಮತ್ತು ಆತನು ಕೊಡುವ ರಕ್ಷಣೆಯ ತಿಳುವಳಿಕೆಯು – ದೇವರ ಪ್ರಕಟನೆಯನ್ನು ಅರ್ಥಮಾಡಿಕೊಂಡಿದ್ದರ ಫಲಿತವಾಗಿರುತ್ತದೆ. **ದೇವರು ತಿಳಿಸಿರುವ ಮರ್ಮವನ್ನು ಅಂದರೆ**

**. . . ಕ್ರಿಸ್ತನನ್ನು** ಎಂಬ ಪದಗುಚ್ಛವು ಗ್ರೀಕ್‌ನಲ್ಲಿ ವಿವಿಧ ರೂಪಗಳನ್ನು ಹೊಂದಿದೆ ಮತ್ತು ವಿವಿಧ ರೀತಿಗಳಲ್ಲಿ ಅರ್ಥನಿರೂಪಣೆ ಮಾಡಲ್ಪಡಬಹುದಾಗಿದೆ:

> ಗ್ರೀಕ್ ವಾಕ್ಯವನ್ನು ನಾಲ್ಕು ಬೇರೆ ಬೇರೆ ರೀತಿಗಳಲ್ಲಿ ಅರ್ಥಮಾಡಿಕೊಳ್ಳಬಹುದಾಗಿದೆ: (1) "ದೇವರು ತಿಳಿಸಿರುವ ಮರ್ಮವನ್ನು ಅಂದರೆ ಕ್ರಿಸ್ತನನ್ನು," ಅದರಲ್ಲಿ "ಕ್ರಿಸ್ತನು" "ದೇವರಿಗೆ" ಏಕಾನ್ವಯದಲ್ಲಿರುತ್ತಾನೆ, (2) "ಕ್ರಿಸ್ತನ ಕುರಿತ ದೇವರ ಮರ್ಮ," ಆದರೆ ಕ್ರಿಸ್ತನು ಎಂಬದಕ್ಕೆ ಮುಂಚೆ ನಿರ್ದೇಶಕ ಗುಣವಾಚಿಯು ಇಲ್ಲದಿರುವಿಕೆಯು ಅದನ್ನು ಅಸಂಭವಗೊಳಿಸುತ್ತದೆ, (3) "ದೇವರಾದ ಕ್ರಿಸ್ತನ ಮರ್ಮ" (ಅಥವಾ, "ದೈವಿಕ ಕ್ರಿಸ್ತನು"), ಅದಕ್ಕೆ [ಹೊಸ ಒಡಂಬಡಿಕೆ] ಯಲ್ಲಿ ಯಾವ ಸಮಾನಾರ್ಥಕವಾದದ್ದು ಇರುವದಿಲ್ಲ, ಮತ್ತು (4) "ದೇವರ ಮರ್ಮವಾಗಿರುವ ಕ್ರಿಸ್ತನೇ," ಇದರಲ್ಲಿ "ದೇವರ ಮರ್ಮ" ಎಂಬ ಇಡೀ ಪದಗುಚ್ಛಕ್ಕೆ "ಕ್ರಿಸ್ತನು" ಎಂಬದು ಏಕಾನ್ವಯದಲ್ಲಿರುತ್ತದೆ. ಈ ಕಡೆಯ ಅರ್ಥವೇ ವ್ಯಾಪಕ ಪ್ರಮಾಣದ ಆಧುನಿಕ ವ್ಯಾಖ್ಯಾನಕಾರರು ಮತ್ತು ಅನುವಾದಕರಿಂದ ಅಂಗೀಕರಿಸಿಕೊಳ್ಳಲ್ಪಟ್ಟಿದೆ.[5]

H. C. G. Moule ಮತ್ತು ಇನ್ನು ಅನೇಕರು ಈ ಅಂತಿಮ ಅಭಿಪ್ರಾಯದೊಂದಿಗೆ ಸಹಮತ ವ್ಯಕ್ತಪಡಿಸುತ್ತಾರೆ. ವಿವಿಧ ಸಾಧ್ಯತೆಗಳನ್ನು ಚರ್ಚಿಸಿದ ಬಳಿಕ, Moule ಹೀಗೆ ಹೇಳುತ್ತಾನೆ, "ಆದ್ದರಿಂದ ನಾವು 'ದೇವರ ಮರ್ಮ, ಕ್ರಿಸ್ತನೇ' ಎಂಬ ಅರ್ಥವನ್ನು ಕೊಡುತ್ತೇವೆ."[6] ಆತನ ಜೀವನ ಮತ್ತು ಬೋಧನೆಯಲ್ಲಿ ಕಾಣಲ್ಪಟ್ಟಿರುವಂತೆಯೇ, ಯೇಸುವು ಹಿಂದಿನ ಯುಗಯುಗಗಳಿಂದಲೂ ಮರೆಯಾಗಿದ್ದಂಥ ಮರ್ಮದ ಪ್ರಕಟನೆಯಾಗಿರುತ್ತಾನೆ. ಹಳೆಯ ಒಡಂಬಡಿಕೆಯಲ್ಲಿನ ಪ್ರವಾದನೆಗಳು ಆತನ ಬರೋಣದ ಕುರಿತು ಮತ್ತು ಆತನ ಕೆಲಸವು ಹೇಗಿರುತ್ತದೆಂಬ ಬಗ್ಗೆ ಸುಳಿವುಗಳನ್ನು ನೀಡಿದವು, ಆದರೆ ಆತನು ಲೋಕದೊಳಗೆ ಬರುವ ತಕನವೂ ಮರ್ಮವು ಮರೆಯಾಗಿಯೇ ಉಳಿದಿತ್ತು. ಆತನ ಬರೋಣದ ನಿಮಿತ್ತವಾಗಿ, ದೇವರ ನಿಜಜ್ಞಾನವು ಈಗ ಯೇಸುವಿನಲ್ಲಿ ಲಭ್ಯವಿರುತ್ತದೆ: "ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವಜ್ಞಾನವೆಂಬ ಪ್ರಕಾಶವು . . . ನಮ್ಮ ಹೃದಯಗಳಲ್ಲಿ ಹೊಳೆದನು" (2 ಕೊರಿಂಥ 4:6).

"ಮರ್ಮ" (μυστήριον, *mustērion*) ಎಂಬುದು ಈ ಪತ್ರಿಕೆಯಲ್ಲಿ ನಾಲ್ಕು ಸಾರಿ ಉಲ್ಲೇಖಿಸಲ್ಪಟ್ಟಿದೆ (1:26, 27; 2:2; 4:3). ಇದರ ಅರ್ಥವು ಆಂಗ್ಲ ಪದಕ್ಕಿಂತ ವ್ಯತ್ಯಾಸವಾಗಿರುತ್ತದೆ, ಅದು ಸಾಮಾನ್ಯವಾಗಿ ವಿವರಿಸಲಿಕ್ಕಾಗದಷ್ಟು ಅಥವಾ ಅರ್ಥಮಾಡಿಕೊಳ್ಳಲಾಗದಷ್ಟು ನಿಗೂಢ ಮತ್ತು ದಿಗ್ಭ್ರಮೆಗೊಳಿಸುವದು ಎಂದರ್ಥವನ್ನು ಕೊಡುತ್ತದೆ. ಕೇವಲ ಮಾನುಷ ತರ್ಕ ಮತ್ತು ಪ್ರಯಾಸದಿಂದಲ್ಲ, ಆದರೆ ದೈವಿಕ ಪ್ರಕಟನೆಯ ಮೂಲಕ ಮಾತ್ರವೇ ಅರ್ಥಮಾಡಿಕೊಳ್ಳಬಹುದಾದ ದೈವಿಕ ರಹಸ್ಯವನ್ನು ಸೂಚಿಸುವದಕ್ಕೆ ಈ ಪದವನ್ನು ಬಳಸಿದನು.

ಗ್ರೀಕ್ ಮತ್ತು ರೋಮನ್ ಸಂಸ್ಕೃತಿಗಳಲ್ಲಿ, "ಮರ್ಮ" ಎಂಬ ಪದವನ್ನು ವಿವಿಧ ಗೂಢಾರ್ಥಕ ಧರ್ಮಗಳಿಗೆ ಅನ್ವಯಿಸಲಾಗುತ್ತಿತ್ತು. ದೇವದೇವತೆಗಳ ಕಥೆಗಳ ಮೇಲೆ ಆಧಾರವಾಗಿದ್ದ ಅವರ ಮತಾಚಾರಣೆಗಳು ಪೌರಾಣಿಕ ನಾಟಕಗಳಂತಿದ್ದವು. ಈ ಕುಪಂಥಗಳು ಅರ್ಥವಾಗದ ಕ್ಲಿಷ್ಟಕರವಾದ ಸಂಕೇತಗಳನ್ನು ಹೊಂದಿರುತ್ತಿದ್ದವು, ಅವುಗಳನ್ನು ಸದಸ್ಯರಾಗಲು ಬಯಸುವವರಿಗೆ ಜಾಗರೂಕತೆಯಿಂದ ಕಲಿಸಿ

ಕೊಡಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಸದಸ್ಯತ್ವವನ್ನ ಪಡೆದುಕೊಳ್ಳುವಿಕೆಯ ದೀಕ್ಷೆಗೋಸ್ಕರ ಸೇರ್ಪಡೆಗೊಳ್ಳಲಿದ್ದವನು ಸದಸ್ಯರಿಂದ ನಟಿಸಲ್ಪಡುತ್ತಿದ್ದ ಅವರ ದೇವರುಗಳ ಶ್ರಮೆ, ಮರಣ ಮತ್ತು ಪುನರುತ್ಥಾನದ ನಾಟಕವನ್ನು ವೀಕ್ಷಿಸುವ ಮೂಲಕ ಆ ದೇವರುಗಳ ಶ್ರಮೆಯಲ್ಲಿ ಪಾಲುಗಾರರಾಗಬೇಕಾಗಿತ್ತು. ಹೊರಗಿನವನಿಗೆ, ಅದು ಅರ್ಥಹೀನ ಅನ್ನಿಸುತ್ತಿತ್ತು; ಆದರೆ ದೀಕ್ಷೆ ತೆಗೆದುಕೊಳ್ಳುವವನಿಗಾದರೋ, ಈ ಅನುಭವವು ಪ್ರಭಾವ ಬೀರುವಂಥದ್ದು ಮತ್ತು ರೂಪಾಂತರಗೊಳಿಸುವ ಸ್ವಭಾವವುಳ್ಳದ್ದು ಎಂದು ಅನ್ನಿಸುತ್ತಿತ್ತು.

ಯೇಸುವು ಪ್ರವಾದಿಸಲ್ಪಟ್ಟ ರಾಜ್ಯದ ಪ್ರಕಟಗೊಳಿಸಲ್ಪಡದ ಸ್ವಭಾವವನ್ನು ಸೂಚಿಸುವದಕ್ಕಾಗಿ *mustērion* ಎಂಬ ಪದವನ್ನು ಬಳಸಿದನು (ಮತ್ತಾಯ 13:11). ಕ್ರಿಸ್ತನ ಮೂಲಕ ದೇವರು ಯೋಜಿಸಿದ್ದಂತ ಕಾರ್ಯವು ಹಿಂದಿನ ಯುಗಯುಗಗಳಿಂದಲೂ ಮರೆಯಾಗಿ ಇಡಲ್ಪಟ್ಟಿತ್ತು ಆದರೆ ಪವಿತ್ರಾತ್ಮನ ಮೂಲಕ ಅಪೊಸ್ತಲರಿಗೂ ಪ್ರವಾದಿಗಳಿಗೂ ಪ್ರಕಟಗೊಳಿಸಲ್ಪಟ್ಟಿತು (ರೋಮಾ 16:25; ಎಫೆಸ 3:4, 5). ಇತರರ ಜೊತೆಯಲ್ಲಿ, ಪೌಲನು ಈ ಪ್ರಕಟನೆಯನ್ನು ಹೊಂದಿಕೊಂಡಿದ್ದನು (1 ಕೊರಿಂಥ 4:1; ಎಫೆಸ 1:9; 3:3).

## ಆತನ ಪ್ರಕಟನೆ: ಕ್ರಿಸ್ತನಲ್ಲಿ ಸಕಲ ಜ್ಞಾನ ಮತ್ತು ತಿಳುವಳಿಕೆ (2:2-4)

**2-3. . . ತನ್ನಲ್ಲೇ ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳನ್ನೆಲ್ಲಾ ಅಡಗಿಸಿಕೊಂಡಿರುವ ಕ್ರಿಸ್ತನನ್ನು ತಿಳುಕೊಂಡವರಾಗಿ ಹೃದಯದಲ್ಲಿ ದೃಢವಾಗಿರಬೇಕೆಂದು ಕುತೂಹಲವು ನನಗುಂಟು. 4ಯಾರಾದರೂ ರಂಜನೆಯಾದ ಮಾತುಗಳಿಂದ ನಿಮ್ಮನ್ನು ಮೋಸಗೊಳಿರಿಯಾರೆಂಬ ಭಯ ನನಗಿರುವದರಿಂದ ಇದನ್ನು ಹೇಳಿದ್ದೇನೆ.**

### "ತನ್ನಲ್ಲೇ ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳನ್ನೆಲ್ಲಾ ಅಡಗಿಸಿಕೊಂಡಿರುವ" (2:2, 3)

**ಅಡಗಿಸಿಕೊಂಡಿರುವ** (ἀπόκρυφοι, *apokruphoi*) ಎಂಬುದು ಆಂಗ್ಲದ "apocrypha" ಮತ್ತು "apocryphal" ಪದಗಳಿಗೆ ತಳಹದಿಯಾಗಿರುತ್ತದೆ. ಪೌಲನು ಆತ್ಮೀಕ **ನಿಕ್ಷೇಪಗಳು** ಮತ್ತು **ಜ್ಞಾನ**ದ ಬಗ್ಗೆ ಬರೆಯುತ್ತಿದ್ದಾನೆ. ಪ್ರಾಚೀನ ಜಗತ್ತಿನಲ್ಲಿ, ಬ್ಯಾಂಕ್.ಗಳು ಬರುವದಕ್ಕೆ ಮುಂಚೆ, ಬಹಳ ಮೌಲ್ಯವುಳ್ಳ ನಿಕ್ಷೇಪಗಳನ್ನು ಅನೇಕ ಸಾರಿ ಅಗತ್ಯ ಬೀಳುವ ತನಕ ಒಂದು ಭದ್ರವಾದ ಸ್ಥಳದಲ್ಲಿ ಸುರಕ್ಷಿತವಾಗಿ ಇಡಲ್ಪಡುತ್ತಿದ್ದವು. ದೇವರ ಆತ್ಮೀಕ ನಿಕ್ಷೇಪಗಳನ್ನು ಕಂಡುಕೊಳ್ಳಬೇಕೆಂದರೆ, ಹುಡುಕುವವನು ದೇವರ ನಿಕ್ಷೇಪಗಳನ್ನು ಅಡಗಿಸಿಡಲ್ಪಟ್ಟಿರುವ ಸ್ಥಳವನ್ನು ಹುಡುಕಬೇಕು: ಯೇಸು ಕ್ರಿಸ್ತನು.

ಕೊಲೊಸ್ಸೆಯವರು ದೇವರ ಭಂಡಾರದಲ್ಲಿರುವ ಯೇಸುವಿನ ಎಲ್ಲಾ ಬೋಧನೆಗಳನ್ನು ಗ್ರಹಿಸಿಕೊಳ್ಳಲು ಶಕ್ತರಾಗುವರೆಂಬ ಅರ್ಥದಲ್ಲಿ ಪೌಲನು ಹೇಳಲಿಲ್ಲ. ಆತನ ಬಯಕೆಯೇನಾಗಿತ್ತೆಂದರೆ ಎಲ್ಲಾ "ಜ್ಞಾನ" ಮತ್ತು **ವಿದ್ಯೆ** (γνῶσις, *gnōsis*) ಕ್ರಿಸ್ತನಲ್ಲಿ ಅಡಗಿವೆಯೆಂಬದನ್ನು ಮತ್ತು ಬೇರೆ ಎಲ್ಲಿಯೂ ಸಿಕ್ಕುವದಿಲ್ಲ ಎಂಬದನ್ನು ಅವರು ಮನದಟ್ಟು ಮಾಡಿಕೊಳ್ಳಬೇಕೆಂಬದೆ. ಈ ಕಾರಣಕ್ಕಾಗಿ, ಬೇರೆ ಕಡೆಯಲ್ಲಿ ಹುಡುಕಬಾರದಾಗಿತ್ತು: ಅವರು ಕ್ರಿಸ್ತನಿಗೆ ಮುಂಚೆ ಇದ್ದಂಥ ಅಥವಾ ಹೊಸ ಒಡಂಬಡಿಕೆಯ ಅಪೊಸ್ತಲರು ಮತ್ತು ಪ್ರವಾದಿಗಳ ನಂತರದಲ್ಲಿ ಕಲ್ಪಿಸಿಕೊಳ್ಳಲಾದ ಬೋಧನೆಗಳಿಗೆ ಅವರು ನಿಷ್ಠೆಯನ್ನು

ತೋರಬಾರದು. ಕ್ರೈಸ್ತನಿಗೆ ಅಗತ್ಯವಿರುವದು ಯೇಸು ಮಾತ್ರವೇ.

**“ಯಾರಾದರೂ ರಂಜನೆಯಾದ ಮಾತುಗಳಿಂದ ನಿಮ್ಮನ್ನು ಮೋಸಗೊಳಿಸಿಯಾರೆಂಬ ಭಯ ನನಗಿರುವದರಿಂದ ಇದನ್ನು ಹೇಳಿದ್ದೇನೆ” (2:4)**

ಅವರು ಜ್ಞಾನ ಮತ್ತು ವಿದ್ಯೆಗಾಗಿ ಬೇರೆ ಕಡೆಯಲ್ಲಿ ಹುಡುಕುವ ಅಗತ್ಯವಿಲ್ಲ ಎಂಬ ಭರವಸೆಯನ್ನು ಪೌಲನು ಕೊಲೊಸ್ಸೆಯ ಸಹೋದರರಿಗೆ ನೀಡುತ್ತಿದ್ದಾನೆ. ಅಲ್ಲದೆ ಆತನು ಅವರನ್ನು ಕ್ರಿಸ್ತನ ಸ್ಥಾಪಿಸಲ್ಪಟ್ಟ ಸತ್ಯವನ್ನು ಬಿಟ್ಟು ಆಕರ್ಷಕವಾಗಿರುವ ಆದರೆ ಶೂನ್ಯವಾದ ಯೋಚನೆಗಳನ್ನು ಅನುಸರಿಸಬಾರದೆಂದು ಸಹ ಎಚ್ಚರಿಸುತ್ತಿದ್ದಾನೆ. ಕ್ರೈಸ್ತರಿಗೆ ಸುಳ್ಳು ಬೋಧಕರಿಂದ, ಹೃದಯ ಸ್ಪರ್ಶಿ ವಾಗ್ಮಿಗಳಿಂದ, ಮತ್ತು ಭಾವಾತ್ಮಕವಾಗಿ ಆಕರ್ಷಣೀಯವಾದ ಕಾರ್ಯಕ್ರಮಗಳಿಂದ ಮನವೊಲಿಸಲ್ಪಡುವ ಅಪಾಯವು ಯಾವಗಲೂ ಇದ್ದೇ ಇರುತ್ತದೆ. **ಯಾರದರೂ** ಎಂದು ಹೇಳು ಮೂಲಕ, ಪೌಲನು ಮನಸ್ಸಿನಲ್ಲಿ ನಿರ್ದಿಷ್ಟವಾದ ವ್ಯಕ್ತಿಯನ್ನು ಇಟ್ಟುಕೊಂಡು ಹೇಳಲಿಲ್ಲ. ಆತನ ವಿಶಾಲ ಹೇಳಿಕೆಯು ಯೇಸುವಿನಿಂದ ಮಾಡಲ್ಪಟ್ಟ ಬೋಧನೆಗೆ ವಿರುದ್ಧವಾದದ್ದನ್ನು ಬೋಧಿಸುವ ಯಾವನೇ ಆಗಲಿ ಆತನಿಗೆ ಅನ್ವಯಿಸುತ್ತದೆ. “ನಾವೇ” – ತಾನು ಸಹ ಸೇರಿದಂತೆ, ಅಪೊಸ್ತಲರು – ಆಗಲಿ ಅಥವಾ ಪರಲೋಕದಿಂದ ಬಂದ ದೇವದೂತನಾಗಲಿ ಯಾವನಾದರೂ ಬೇರೊಂದು ಸುವಾರ್ತೆಯನ್ನು ಸಾರಿದರೆ ಆತನು ಶಾಪಗ್ರಸ್ತನಾಗಲಿ ಎಂದು ಪೌಲನು ಹೇಳುತ್ತಾನೆ (ಗಲಾತ್ಯ 1:7, 8).

ದೋಷಪೂರಿತ ಬೋಧನೆಗಳನ್ನು ಮಾಡುವವರು ಇಂಪಾದ ಅನುಭವ ನೀಡುವ ಪ್ರಸಂಗಗಳ ಮೇಲೆ ಆಧಾರಗೊಳಿಸುವದಾದರೆ ಯಶಸ್ಸುಗೊಳ್ಳಬಹುದಾಗಿದೆ. ಕ್ರೈಸ್ತರು ತಮ್ಮ ನಂಬಿಕೆಗಾಗಿ ಬಲವಾದ ಅಸ್ತಿವಾರದ ಮೇಲೆ ಅವಲಂಭಿತರಾಗಬಹುದು, ಯಾಕೆಂದರೆ ಯೇಸು ಕಟ್ಟುವದಕ್ಕೆ ಅಗತ್ಯವಾದ ದೃಢವಾದ ಸತ್ಯವನ್ನು ಪ್ರಕಟಗೊಳಿಸಿರುತ್ತಾನೆ (ಮತ್ತಾಯ 7:24-27). ಜನರು ಕೇಳಿಸಿಕೊಳ್ಳಲು ಬಯಸುವಂಥ ಆಚಾರಗಳು ಮತ್ತು ತರ್ಕಗಳು (2 ತಿಮೊಥೆ 4:3, 4) ದಾರಿ ತಪ್ಪಿಸುವಂಥವುಗಳಾಗಿವೆ. ಕ್ರೈಸ್ತರು ಆಕರ್ಷಣೀಯವಾದ ಮಾತುಗಳನ್ನಾಡುವ ಪ್ರಸಂಗಿಗಳನ್ನು ಮತ್ತು ಕುತೂಹಲಕರವಾದ ಬೋಧನೆಗಳಿಗೆ ಮೋಸ ಹೋಗದೆ ಕಲಿಸಲ್ಪಡುವದರ ತಿರುಳು ಏನೆಂಬದನ್ನು ಪರೀಕ್ಷಿಸತಕ್ಕದ್ದು. ತಾನು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನೇ ಸಾರಿದೆನೆಂದು ಮತ್ತು ಅವರ ಮನವೊಲಿಸುವದಕ್ಕೆ ಮನುಷ್ಯಜ್ಞಾನವನ್ನು ಬಳಸಲಿಲ್ಲವೆಂದು ಪೌಲನು ಕೊರಿಂಥದವರಿಗೆ ಬರೆದನು (1 ಕೊರಿಂಥ 2:1, 2; ನೋಡಿರಿ 1 ಥೆಸಲೋನಿಕ 2:5).

ಪವಿತ್ರಾತ್ಮನ ಮೂಲಕ ತನಗೆ ಕೊಡಲ್ಪಟ್ಟಿರುವ ಪ್ರಕಟನೆಯನ್ನು ಸಾರುವ ಮತ್ತು ಸಮರ್ಥಿಸಿಕೊಳ್ಳುವ ಮೂಲಕ, ಪೌಲನು ತನ್ನ ಸೇವೆಯನ್ನು ನೆರವೇರಿಸುವವನಾಗಿದ್ದನು. ಆತನನ್ನು ಅಪೊಸ್ತಲನನ್ನಾಗಿ ಮಾಡುವ ಮೂಲಕ ಮತ್ತು ಆತನಿಗೆ ಸುವಾರ್ತೆಯನ್ನು ಪ್ರಕಟಗೊಳಿಸುವ ಮೂಲಕ ಯೇಸು ಆತನನ್ನು ಅರ್ಹಗೊಳಿಸಿದ್ದನು (ಗಲಾತ್ಯ 1:11, 12). ಸಭೆಯ ಕಡೆಗೆ ತನಗಿರುವ ಜವಾಬ್ದಾರಿಯನ್ನು ಪೌಲನು ಗ್ರಹಿಸಿಕೊಂಡಿದ್ದನು (ಕೊಲೊಸ್ಸೆ 1:25), ಅದನ್ನೇ ಈಗ ಆತನು ಕೊಲೊಸ್ಸೆಯವರ ಮತ್ತು ಈ ಪತ್ರಿಕೆಯನ್ನು ಓದಲಿದ್ದ ಇತರರ ಪ್ರಯೋಜನಾರ್ಥವಾಗಿ ನೆರವೇರಿಸುತ್ತಿದ್ದಾನೆ.

2:3-10ರಲ್ಲಿ ಹೇಳಿಕೆಗಳು ಪೌಲನು ಪತ್ರಿಕೆಯ ಉಳಿದ ಭಾಗದಲ್ಲಿ ಮಂಡಿಸಲಿದ್ದ

ಮುಕ್ತಾಯಗಳಿಗೆ ಒಂದು ವಿಷಯದ ರೂಪರೇಷೆಗಳನ್ನು ಒದಗಿಸುವವುಗಳಾಗಿವೆ. ಆತನ ಬೋಧನೆಗಳ ಜೊತೆಯಲ್ಲಿ, ಯೇಸುವೇ, ಎಲ್ಲಾ ಕ್ರೈಸ್ತರಿಗೆ ಅಗತ್ಯವಾಗಿರುತ್ತಾನೆ. ನಾವು ಆಕರ್ಷಕವಾಗಿರಬಲ್ಲ ಆದರೆ ಏಕೈಕ ನಿಜವಾದ ಬೋಧಕ ಯೇಸುವಿನ ಮೇಲೆ ಆಧಾರವಾಗಿರದಂಥ ಸಿದ್ಧಾಂತಗಳಿಂದ ದಾರಿ ತಪ್ಪಿಸಲ್ಪಡಕೂಡದು.

## ಆತನ ಸಂತೋಷ: ಕ್ರಿಸ್ತನಲ್ಲಿ ಅವರ ನಂಬಿಕೆ (2:5)

**5ನಾನು ಶರೀರದಿಂದ ನಿಮ್ಮ ಬಳಿಯಲ್ಲಿ ಇಲ್ಲದಿದ್ದರೂ ಆತ್ಮದಿಂದ ನಿಮ್ಮೊಂದಿಗಿದ್ದು ನೀವು ಕ್ರಮವಾಗಿ ನಡೆಯುವದನ್ನೂ ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಂತಿರುವದನ್ನೂ ನೋಡಿ ಸಂತೋಷಪಡುತ್ತೇನೆ.**

### "ನಾನು ಶರೀರದಿಂದ ನಿಮ್ಮ ಬಳಿಯಲ್ಲಿ ಇಲ್ಲದಿದ್ದರೂ ಆತ್ಮದಿಂದ ನಿಮ್ಮೊಂದಿಗಿದ್ದು"

**ನಾನು ಶರೀರದಿಂದ ನಿಮ್ಮ ಬಳಿಯಲ್ಲಿ ಇಲ್ಲದಿದ್ದರೂ ಆತ್ಮದಿಂದ ನಿಮ್ಮೊಂದಿಗಿದ್ದು** ಎಂದು ಪೌಲನು ಮುಂದುವರೆಸುತ್ತಾನೆ. ಈ ಹೇಳಿಕೆಯಿಂದ ಪೌಲನ ತಾತ್ಪರ್ಯವು ಏನಾಗಿತ್ತು?

ಆತನು ಕೊಲೊಸ್ಸೆಯವರ ಸಂಗಡ – ಮನೆಯಿಂದ ಹೊರಗೆ ಹೋಗುತ್ತಿರುವ ತಂದೆಯ ರೀತಿಯಲ್ಲಿ ಇದ್ದನೋ? ತಂದೆಯು ಹೀಗೆ ಹೇಳಬಹುದು, "ಮಗನೇ, ನಾನು ನಿನ್ನ ಜೊತೆಯಲ್ಲಿ ಶರೀರದಿಂದ ಇರುವದಿಲ್ಲ, ಆದರೆ ಆತ್ಮದಲ್ಲಿ ನಿನ್ನ ಸಂಗಡ ಇರಲಿದ್ದೇನೆ." ಪೌಲನು ಈ ವಿಧವಾದ ಹೇಳಿಕೆಯನ್ನು ಬೇರೊಂದು ಕಡೆಯಲ್ಲಿ ನೀಡಿರುತ್ತಾನೆ: "ಸಹೋದರರರೇ, ನಾವಂತೂ ದೇಹದಲ್ಲಿ ಮಾತ್ರ ನಿಮ್ಮನ್ನು ಸ್ವಲ್ಪಕಾಲ ಅಗಲಿದರೂ ಹೃದಯದಲ್ಲಿ ಅಗಲದೆ ನಿಮ್ಮ ಮುಖವನ್ನು ನೋಡುವದಕ್ಕೆ ಅತ್ಯಾಶೆಯಿಂದ ಬಹಳ ಪ್ರಯತ್ನಮಾಡಿದೆವು" (1 ಥೆಸಲೋನಿಕ 2:17). ಆತನು ಸಹೋದರರ ಕುರಿತಾಗಿ ದೈವಿಕ ದೃಷ್ಟಿಯನ್ನು ಹೊಂದಿದ್ದನೆಂಬದಾಗಿ ಈ ಮಾತುಗಳ ಅರ್ಥವೆಂಬಂತೆ ತೋರುವದಿಲ್ಲ, ಆದರೆ ಆತನಿಗೆ ಅವರ ಕಡೆಗೆ ಇದ್ದ ಪ್ರೀತಿಯ ಮನೋಭಾವದ ನಿಮಿತ್ತವಾಗಿ ಅವರೊಂದಿಗೆ ಇದ್ದನೆಂಬುದನ್ನು ಅವುಗಳು ಸೂಚಿಸುತ್ತವೆ.

ಆತನು ಅವರೊಂದಿಗೆ ಆತ್ಮದಲ್ಲಿ ಇದ್ದದ್ದು ಎಪಫ್ರನು ತಂದಿದ್ದ ವರದಿಯ ನಿಮಿತ್ತದಿಂದಲೋ (1:7)? ಪೌಲನು ಖ್ಲೋಯೆಯ ಮನೆಯವರಿಂದ, ಅವರು ಬರೆದ ಪತ್ರದ ಮೂಲಕ (1 ಕೊರಿಂಥ 7:1) ಕೊರಿಂಥದವರ ಕುರಿತಾಗಿ ಮಾಹಿತಿಯನ್ನು ಪಡೆದುಕೊಂಡಿದ್ದನು (1 ಕೊರಿಂಥ 1:11), ಮತ್ತು ಬಹುಶಃ ಇತರ ಮೂಲಗಳಿಂದ ತಿಳಿದುಕೊಂಡಿರ ಬಹುದಾಗಿದೆ (1 ಕೊರಿಂಥ 4:18; 5:1; 11:18; 15:12; 2 ಕೊರಿಂಥ 7:7; 10:10). ಅಲ್ಲದೆ ಇತರ ಸಭೆಗಳ ವಿಷಯವಾದ ಮಾಹಿತಿಗಳನ್ನು ಸಹ ಆತನು ವಿವಿಧ ಮೂಲಗಳಿಂದ ಪಡೆದುಕೊಂಡಿದ್ದನು (ರೋಮಾ 1:8; 1 ಥೆಸಲೋನಿಕ 1:8; 3:6). ಆತನು ಅವರೊಂದಿಗೆ ಆತ್ಮದಿಂದ ಹತ್ತಿರವಾಗಿದ್ದೇನೆಂದು ಹೇಳಲು ಶಕ್ತನಾಗುವ ಹಾಗೆ ಅಂತಹ ವರದಿಗಳು ಆತನಿಗೆ ಸದಸ್ಯರೊಂದಿಗೆ ನಿಕಟವಾಗಿರುವ ಅನುಭವವನ್ನು ಕೊಟ್ಟವೋ?

ದೇವರು ಕೊಲೊಸ್ಸೆಯವರ ವಿಷಯವಾಗಿ ಅಪೊಸ್ತಲನಿಗೆ ನೇರವಾದ ಅಂತರ್ದೃಷ್ಟಿಯನ್ನು ನೀಡಿದ್ದನೋ? ಒಂದು ವೇಳೆ ಪೌಲನು ಈ ಎರಡು ಸಾಧ್ಯತೆಗಳಲ್ಲಿ

ಯಾವದಾದರೂ ಒಂದೆಂಬ ಅರ್ಥದಲ್ಲಿ ಹೇಳಿರುವದಾದಲ್ಲಿ, ಆತನು ಏಕೆ "ನೀವು ಕ್ರಮವಾಗಿ ನಡೆಯುವದನ್ನೂ ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಂತಿರುವದನ್ನೂ ನೋಡಿ ಸಂತೋಷಪಡುತ್ತೇನೆ" ಎಂದು ಹೇಳಿರಬಹುದಾಗಿದೆ (ವ. 5)? ಆತನು ಎರಡನೆಯ ಸಾಧ್ಯತೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರುವದಾದರೆ, ಆತನಿಗೆ ದೇವರ ಸಹಾಯದಿಂದ ತನ್ನ ಅತ್ಮದಲ್ಲಿ ಗ್ರಹಣಶಕ್ತಿಯಿತ್ತು, ಅದರ ಮೂಲಕ ಅವರ ಆತ್ಮೀಕ ಚಟುವಟಿಕೆಗಳ ಬಗ್ಗೆ ಅರಿವು ಹೊಂದಿರುವಂತೆ ಸಾಧ್ಯವಾಗಿತ್ತು ಎಂದಾಗುತ್ತದೆ.

ಪೌಲನು ದೈವಿಕವಾಗಿ ಕೊಡಲ್ಪಟ್ಟ ಮಾಹಿತಿಗಳನ್ನು ಪಡೆದುಕೊಂಡನೆಂಬುದನ್ನು ಇತರ ವಾಕ್ಯಭಾಗಗಳು ತಿಳಿಯಪಡಿಸುತ್ತವೆ (ಗಲಾತ್ಯ 1:6; 6:12; ಫಿಲಿಪ್ಪಿ 4:2). 1 ಕೊರಿಂಥ 5:3ರಲ್ಲಿ ಆತನು ಹೀಗೆ ಹೇಳುತ್ತಾನೆ, "ನಾನಂತೂ ದೇಹದಿಂದ ದೂರವಾಗಿದ್ದರೂ ಆತ್ಮದಿಂದ ಹತ್ತರದಲ್ಲಿದ್ದು ಈ ಕಾರ್ಯಮಾಡಿದವನನ್ನು ಕುರಿತು ಆಗಲೇ ಹತ್ತಿರವಿದ್ದವನಂತೆ ತೀರ್ಪುಮಾಡಿದ್ದೇನಂದರೆ." ಈ ವಾಕ್ಯಭಾಗವು ತನಗೆ ತಾನೇ ಅರ್ಥನಿರೂಪಣೆ ಮಾಡುವದೇನೆಂದರೆ, ಪೌಲನು ತನ್ನ ಆತ್ಮದಲ್ಲಿ, ಕೊರಿಂಥದವರ ಚಟುವಟಿಕೆಗಳನ್ನು ಅರಿತವನಾಗಿದ್ದನು. ಆತನು ತನ್ನ ತಾಯಿಯ ಸಂಗಡ ಅನೈತಿಕ ಸಂಬಂಧವನ್ನಿಟ್ಟುಕೊಂಡಿದ್ದ ವ್ಯಕ್ತಿಯೊಬ್ಬನ ಮತ್ತು ತಾಯಿಯ ವಿಷಯವಾಗಿ ತೀರ್ಪುಮಾಡುವದಕ್ಕೆ ಶಕ್ತನಾಗಿದ್ದನು, ಆತನಿಗೆ ತನ್ನ ಆತ್ಮದಲ್ಲಿ ಅವರ ಸಂಬಂಧದ ಬಗ್ಗೆ ತಿಳಿದುಕೊಂಡಿದ್ದನು.

## "ನೀವು ಕ್ರಮವಾಗಿ ನಡೆಯುವದನ್ನೂ ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಂತಿರುವದನ್ನೂ ನೋಡಿ ಸಂತೋಷಪಡುತ್ತೇನೆ"

ಪೌಲನು ಈ ಮಾಹಿತಿಯನ್ನು ಯಾವ ವಿಧದಲ್ಲಿ ಪಡೆದುಕೊಂಡಿದ್ದರೂ ಸರಿಯೇ, ಆತನು ತನ್ನ ವಾಚಕರಿಗೆ [ಅವರು] **ಕ್ರಮವಾಗಿ ನಡೆಯುವದನ್ನೂ ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಂತಿರುವದನ್ನೂ ನೋಡಿ ಸಂತೋಷಪಡುತ್ತೇನೆ** ಎಂದು ಹೇಳುತ್ತಾನೆ. ಅವರು ಜೀವಿಸುತ್ತಿದ್ದ ಉತ್ತಮ ಜೀವಿತಗಳನ್ನು ತನ್ನ ಆತ್ಮದಲ್ಲಿ ನೋಡಿದ್ದು ಆತನಿಗೆ ಸಂತೋಷವನ್ನು ತಂದಿತ್ತು. ಅಪೊಸ್ತಲ ಯೋಹಾನನು ನಂಬಿಗಸ್ತ ಕ್ರೈಸ್ತರ ಜೀವಿತಗಳ ಸಂತೋಷಕ್ಕೆ ಕಾರಣವಾಗಿರುತ್ತವೆಂಬದಾಗಿ ಕಂಡನು. ಆತನು ಹೀಗೆ ಹೇಳಿದನು, "ನನ್ನ ಮಕ್ಕಳು ಸತ್ಯವನ್ನನುಸರಿಸಿ ನಡೆಯುವವರಾಗಿದ್ದಾರೆಂದು ಕೇಳುವದಕ್ಕಿಂತ ಹೆಚ್ಚಾದ ಸಂತೋಷ ನನಗಿಲ್ಲ" (3 ಯೋಹಾನ 4; ನೋಡಿರಿ 2 ಯೋಹಾನ 4). ಕ್ರೈಸ್ತರು ಜೀವಿಸುವ ಭಕ್ತಿವುಳ್ಳ ಮತ್ತು ನೀತಿಯ ಜೀವಿತಗಳನ್ನು ನೋಡುವಾಗ ದೇವರ ಬೋಧಕನು ಸಂತೋಷದಿಂದ ತುಂಬಿಸಲ್ಪಡುತ್ತಾನೆ. ಕ್ರಿಸ್ತನ ಉತ್ತಮ ಸೇವಕರು ತನ್ನ ಪ್ರಯಾಸಗಳಿಗೆ ಅನುಕೂಲಕರವಾದ ಫಲಿತಗಳುಂಟಾಗುವದನ್ನು ಕಂಡಾಗ ಹರ್ಷಗೊಳ್ಳುತ್ತಾರೆ.

ಪೌಲನು ಕೊಲೊಸ್ಸೆಯವರು "ಕ್ರಮವಾಗಿ ನಡೆಯುವದನ್ನು" (τάξις, *taxis*) ಮತ್ತು ಕ್ರಿಸ್ತನಲ್ಲಿ ಅವರಿಟ್ಟ ನಂಬಿಕೆಯಲ್ಲಿ "ದೃಢವಾಗಿ ನಿಂತಿರುವದನ್ನು" (στερέωμα, *stereōma*) ಕಂಡನು. ಈ ಎರಡು ಪದಗಳ ವಿಷಯವಾಗಿ Robert G. Bratcher ಮತ್ತು Eugene A. Nida ಹೀಗೆ ಬರೆಯುತ್ತಾರೆ, "*Taxis* ಒಂದು ಮಿಲಿಟರಿ ಪದವಾಗಿದ್ದು, 'ಕ್ರಮವಾದ ಪಂಕ್ತಿಗಳು,' 'ನೀಟಾದ ಸಾಕುಗಳು' ಎಂದರ್ಥವಾಗಿರುತ್ತದೆ; *stereoma* ಎಂದರೆ 'ಅಚಲತೆ,' 'ಗಟ್ಟಿತನ' ಎಂಬರ್ಥವಾಗಿದೆ ಮತ್ತು ಅದು ಸಹ ಮಿಲಿಟರಿ ಸನ್ನಿವೇಶದಲ್ಲಿ ಬಳಸಲ್ಪಡುತ್ತದೆ."[7]

ಮಿಲಿಟರಿ ಹಿನ್ನಲೆಯಿಂದ ಹೊರಗಡೆಯಲ್ಲಿ, ಈ ಪದಗಳು ಒಂದು ಯಾಜಕತ್ವದ ವರ್ಗ ಎಂಬರ್ಥವನ್ನು ಕೊಡುತ್ತವೆ (ಲೂಕ 1:8; ಇಬ್ರಿಯ 5:6) ಅಥವಾ ಅಪೊಸ್ತಲರ ಕೃತ್ಯಗಳು 3:7ರಲ್ಲಿರುವಂತೆ, ಶಾರೀರಿಕವಾಫಿ ಬಲಗೊಳಿಸಲ್ಪಟ್ಟ ಜೀವಿತಗಳು ಎಂಬ ಅರ್ಥವನ್ನು ಕೊಡುತ್ತವೆ.

ಕೊರಿಂಥದವರಿಗೆ ನೀಡುವ ತನ್ನ ಬೋಧನೆಯಲ್ಲಿ, ಪೌಲನು ಕ್ರೈಸ್ತ ಆರಾಧನಾ ಸಭೆಯಲ್ಲಿ ಎರಡು ಚಟುವಟಿಕೆಗಳು ಏಕಕಾಲದಲ್ಲಿ ನಡಿಸಲ್ಪಡಕೂಡದು ಎಂದು ಹೇಳುವಾಗ *taxis* ಪದವನ್ನು ಬಳಸುತ್ತಾನೆ. ಅದು ಅಡ್ಡಿಯನ್ನುಂಟು ಮಾಡುವದಾಗಿರುತ್ತದೆ. ಬದಲಾಗಿ, ಆರಾಧನೆಯಲ್ಲಿನ ಕಾರ್ಯಗಳನ್ನು ಅನುಕ್ರಮತೆಯ ರೀತಿಯಲ್ಲಿ ಮತ್ತು "ಕ್ರಮದಿಂದಲೂ" ನಡೆಯತಕ್ಕದ್ದು (1 ಕೊರಿಂಥ 14:40, 27, 31 ವಚನಗಳಿಗೆ ಸಂಬಂಧಪಟ್ಟಂತೆ). ಬೋಧಕನು ಮಾತಾಡುತ್ತಿರುವ ವೇಳೆಯಲ್ಲಿ ಹಾಡುಗಳನ್ನು ಹಾಡುವದು ಅಡ್ಡಿಯನ್ನುಂಟು ಮಾಡುವದಾಗಿದೆ. ಕರ್ತನ ಭೋಜನದಲ್ಲಿ ಪಾಲುಗಾರರಾಗಿರುವವರು ಧ್ಯಾನದಲ್ಲಿರುವ ವೇಳೆ ಹಾಡುವದು ಕ್ರಮವನ್ನು ಕೆಡಿಸುವದಾಗಿರುತ್ತದೆ. ಆರಾಧನೆಯಲ್ಲಿ ಒಂದು ಚಟುವಟಿಕೆಯು ಇನ್ನೊಂದಕ್ಕೆ ವಿರುದ್ಧವಾಗುವದಾದರೆ ಅದು *taxis*, "ಕ್ರಮವಾದದ್ದು" ಆಗಿರುವದಿಲ್ಲ.

ಕ್ರೈಸ್ತ ಜೀವಿತಗಳು ಕ್ರಮಗೊಳಿಲ್ಪಡಬೇಕು, ನಿಯಂತ್ರಣದಲ್ಲಿರಬೇಕು ಮತ್ತು ದೃಢವಾಗಿರಬೇಕೆಂದು ಪೌಲನು ಇಚ್ಚೆಸಿದನು. ತಾನು ಸ್ವತಃ ತನ್ನ ಜೀವಿತಕ್ಕಾಗಿ ಅಪೇಕ್ಷಿಸಿದ ಪ್ರಕಾರವೇ, ಅವರು ಬಲಗೊಳಿಸಲ್ಪಡಬೇಕು ಎಂದು ಬಯಸಿದನು. ಆತನು ಹೀಗೆ ಬರೆಯುತ್ತಾನೆ, "ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ" (1 ಕೊರಿಂಥ 9:27).

ನಂಬಿಕೆಗೆ ಒಂದು ತಳಹದಿ ಇರತಕ್ಕದ್ದು. ಅದು ಬೋಧನೆಗಳ ಮೇಲೆ, ಇತರರ ಮೇಲೆ, ಅಥವಾ ಭೌತಿಕ ಸಂಗತಿಗಳ ಮೇಲೆ ನೆಲೆಗೊಳಿಸಲ್ಪಡಬಹುದಾಗಿದೆ. ಕ್ರೈಸ್ತ ನಂಬಿಕೆಯು ಯೇಸುವಿನಲ್ಲಿ – ಕೇವಲ ಶಾರೀರಿಕ ಆಶೀರ್ವಾದಗಳಿಗಾಗಿ ಮಾತ್ರವಲ್ಲ (ಮತ್ತಾಯ 6:33), ಆದರೆ ಆತ್ಮೀಕ ಆಶೀರ್ವಾದಗಳಿಗೋಸ್ಕರ ಸಹ (ಎಫೆಸ 1:3) – ಇಡಲ್ಪಡುತ್ತದೆ. ಕ್ರೈಸ್ತ ಜೀವಿತವು ಆತನಲ್ಲಿ ನಂಬಿಕೆಯಿಡುವ ಮೂಲಕ ಆರಂಭಗೊಳ್ಳುತ್ತದೆ, ಆತನಲ್ಲಿಟ್ಟಿರುವ ನಂಬಕೆಯಲ್ಲಿ ಮುಂದೆ ಸಾಗುತ್ತದೆ, ಮತ್ತು ಆತನಲ್ಲಿಟ್ಟಿರುವ ನಂಬಿಕೆಯ ಮೂಲಕ ತನ್ನ ಗುರಿಯನ್ನು ತಲುಪುತ್ತದೆ (ರೋಮಾ 1:17). ಆತನು ಕ್ರೈಸ್ತರಿಗಾಗಿ ಜೀವನ ಮತ್ತು ನಿರೀಕ್ಷೆಯ ಕೇಂದ್ರಬಿಂದುವಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 4:11, 12).

ಕೊಲೊಸ್ಸೆಯವರ ಜೀವಿತಗಳ ಕುರಿತು ತನಗೆ ತಿಳಿದುಕೊಂಡಿದ್ದ ಕಾರ್ಯಗಳ ನಿಮಿತ್ತವಾಗಿ, ಅವರು ಉತ್ತಮವಾಗಿದ್ದಾರೆ ಮತ್ತು ನಿಜವಾದ ನಂಬಿಕೆಯನ್ನು ಹೊಂದಿದವರಗಿದ್ದಾರೆಂಬದನ್ನು ಬಲ್ಲವನಾಗಿದ್ದನು. ಈ ವಾಸ್ತವಾಂಶವು ಆತನು ಅವರನ್ನು ಪ್ರಾಪಂಚಿಕ ಭೋಗಗಳಿಂದ, ರೋಮಾಂಚನಗೊಳಿಸುವ ಆಚಾರಗಳಿಂದ, ಮಾನುಷ ತತ್ವಜ್ಞಾನದಿಂದ, ಅಥವಾ ಮನವೋಲಿಸುವ ರಂಜನೆಯ ಮಾತುಗಳಿಂದ ಮೋಸ ಹೋಗಬಾರದು ಎಂಬದಾಗಿ ಎಚ್ಚರಿಸದಿರುವಂತೆ ತಡೆಯಲಿಲ್ಲ. ಕೆಲವರು ಸತ್ಯಕ್ಕಿಂತಲೂ ವ್ಯಕ್ತಿಗಳಿಂದ ಪ್ರಭಾವಕ್ಕೊಳಗಾಗಿದ್ದಾರೆಂಬದನ್ನು ಆತನು ಗ್ರಹಿಸಿಕೊಂಡಿದ್ದನು. ನಿಜವಾದ

ನಂಬಿಕೆಯನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳತಕ್ಕದ್ದು, ಯಾಕೆಂದರೆ ಅದು ನಿರಂತರವಾಗಿ ಸವಾಲುಗಳನ್ನು ಎದುರಿಸುತ್ತದೆ.

ಕೊಲೊಸ್ಸೆಯವರ ಆತ್ಮೀಕ ಹಿತದ ಕುರಿತು ಕಾಳಜಿಯನ್ನು ವ್ಯಕ್ತಪಡಿಸುವದಕ್ಕಾಗಿ ಅಥವಾ ಅವರನ್ನು ಪ್ರೋತ್ಸಾಹಿಸುವದಕ್ಕಾಗಿ ಪೌಲನು ಶರೀರದಲ್ಲಿ ಅಲ್ಲಿರುವ ಅಗತ್ಯವಿರಲಿಲ್ಲ. ಆತನು ತನ್ನ ಆತ್ಮದಲ್ಲಿ ಅವರ ಆತ್ಮೀಕ ಅಗತ್ಯತೆಗಳೇನು ಎಂಬದನ್ನು ಪರಿಗಣಿಸುವದಕ್ಕೆ ಮತ್ತು ತಾನು ಅವರೊಂದಿಗೆ ಇಲ್ಲದಿದ್ದಾಗ್ಯೂ ಅವುಗಳನ್ನು ಪೂರೈಸುವದಕ್ಕೆ ಅಪೇಕ್ಷಿಸಲು ಶಕ್ತನಾಗಿದ್ದನು.

## ಆತನು ನೀಡಿದ ಬುದ್ಧಿವಾದ: ಅವರು ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆಯುವದು (2:6)

**[6]ಆದದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ.**

### "ಆದದರಿಂದ ನೀವು ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ"

ಆದದರಿಂದ (οὖν, *oun*) ಎಂಬುದು ಈ ಯೋಚನೆಯನ್ನು ಕ್ರಿಸ್ತನಲ್ಲಿ ಅಡಗಿರುವ "ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳು" ಎಂಬ ಹೇಳಿಕೆಯೊಂದಿಗೆ ಜೋಡಣೆ ಮಾಡುತ್ತದೆ (ವ. 3). ಈ ನಿಕ್ಷೇಪಗಳು ಅವರಿಗೆ ಕ್ರಿಸ್ತನಲ್ಲಿ ಲಭ್ಯವಿರುತ್ತವೆಂಬದನ್ನು ತಿಳಿದವರಾರಿ, ಕೊಲೊಸ್ಸೆಯವರು ಆತನೊಬ್ಬನನ್ನೇ ಅಂಟಿಕೊಂಡಿಬೇಕಾಗಿತ್ತು ಮತ್ತು ಆತನ ಆಜ್ಞೆಗಳ ಮಾನದಂಡಗಳೊಳಗೆ ತನ್ನ ಜೀವಿತಗಳನ್ನು ಮೀತಿಗೊಳಿಸಿಕೊಳ್ಳತಕ್ಕದ್ದಾಗಿತ್ತು. ಅವರು ಆತನನ್ನು ಸಕಲ ಸತ್ಯದ ಮೂಲವೆಂಬದಾಗಿ ಮತ್ತು ಕರ್ತನಾಗಿ, ಮೆಸ್ಸೀಯನಾಗಿ ಅಂಗೀಕರಿಸಿಕೊಂಡಿದ್ದರು, ಆದರೆ ಕ್ರಿಸ್ತ ಯೇಸುವನ್ನು ಅಂಗೀಕರಿಸುವದೇ ದೇವರಿಗೆ ನಾವು ತೋರಬೇಕಾದ ವಿಧೇಯತೆಗೆ ಅಂತ್ಯವಾಗುವದಿಲ್ಲ. ಬದಲಾಗಿ, ಅದು ಕ್ರೈಸ್ತ ಜೀವಿತದ ಆರಂಭ ಆಗಿರುತ್ತದೆ. ಕ್ರೈಸ್ತ ಜೀವಿತದ ಬೆಳವಣಿಗೆಯು ಅದರ ಆರಂಭದ ಜೊತೆಯಲ್ಲಿ ಸ್ಥಿರತೆಯಿಂದ ಕೂಡಿರಬೇಕು.

ಕೊಲೊಸ್ಸೆಯವರು ಯೇಸುವನ್ನು ಕರ್ತನಾದ ಕ್ರಿಸ್ತನೆಂದು ಅಂಗೀಕರಿಸಿಕೊಂಡಿದ್ದರು; ಅವರು ಆತನನ್ನು ಸಕಲ ಆತ್ಮೀಕ ಯೋಚನೆ ಮತ್ತು ತಿಳಿಬಹುದಾದ ಸತ್ಯದಿಂದ ತುಂಬಿರುವಾತನೆಂದು ಗುರುತಿಸಿಕೊಂಡಿದ್ದರು. ಕ್ರಿಸ್ತನಾಗಿ, ಆತನು ದೇವರ ಅಭಿಷಿಕ್ತ ಅರಸನಾಗಿದ್ದು ಪರಲೋಕ ಮತ್ತು ಭೂಲೋಕಗಳ ಮೇಲೆ ಆಳ್ವಿಕೆ ಮಾಡುವವನಾಗಿದ್ದಾನೆ (ಮತ್ತಾಯ 28:18). ಯೇಸುವಾಗಿ, ("ದೇವರು ರಕ್ಷಿಸುತ್ತಾನೆ"; ನೋಡಿರಿ ಮತ್ತಾಯ 1:21), ಆತನು ಪಾಪಗಳು ಕ್ಷಮಿಸಲ್ಪಡುವದಕ್ಕೆ ದೇವರ ದಾರಿಯಾಗಿದ್ದಾನೆ. ಕರ್ತನಾಗಿ (ರೋಮಾ 10:9), ಆತನು ವಿಧೇಯವಾಗತಕ್ಕ ಒಬ್ಬನೇ ಕರ್ತನು (ಲೂಕ 6:46). ಆತನ ಚಿತ್ತಕ್ಕೆ ವಿರುದ್ಧವಾಗಿ ಬಂಡಾಯವೇಳುವವರು ಪಾಪಕ್ಕೆ ದಾಸರು ಮತ್ತು "ನಾಶವಾಗುವರು" (ಅಪೊಸ್ತಲರ ಕೃತ್ಯಗಳು 3:23). ಹೃದಯಪೂರ್ವಕವಾಗಿ ಸುವಾರ್ತೆಗೆ ವಿಧೇಯರಾಗುವ ಮೂಲಕ, ಕೊಲೊಸ್ಸೆಯವರು ನೀತಿಗೆ ದಾಸರಾಗಿದ್ದರು (ರೋಮಾ 6:17, 18).

ಅವರು ಹೊಸ ಜೀವನಕ್ಕೆ ರೂಪಾಂತರಣಗೊಳ್ಳುವಿಕೆಯು ದೀಕ್ಷಾಸ್ನಾನದ ವೇಳೆಯಲ್ಲಿ

ಸಂಭವಿಸಿತ್ತು, ಆಗ ಅವರು ಯೇಸುವಿನ ಹೂಣಲ್ಪಡುವಿಕೆ ಮತ್ತು ಪುನರುತ್ಥಾನದಲ್ಲಿ ಪಾಲುಗಾರರಾಗುವ ಮೂಲಕ ಆತನನ್ನು ಅಂಗೀಕರಿಸಿಕೊಂಡವರಾಗಿದ್ದರು (ರೋಮಾ 6:4). ಯೇಸುವಿನೊಂದಿಗೆ ಎಬ್ಬಿಸಲ್ಪಟ್ಟ ಬಳಿಕ, ಆತನೊಂದಿಗೆ ಅವರ ಅನ್ಯೋನ್ಯತೆಯು ಮುಂದುವರೆಯುವದಾಗಿತ್ತು ಮತ್ತು ಪಾಪದಲ್ಲಿ ತೊಡಗಿಸಿಕೊಳ್ಳುವದು ನಿಲ್ಲಿಸಲ್ಪಡಬೇಕಾಗಿತ್ತು (ರೋಮಾ 6:5, 6).

ಗ್ರೀಕ್ ಕ್ರಿಯಾಪದ παραλαμβάνω (*paralambanō*, "ಅಂಗೀಕರಿಸಿದರು") ಎಂಬುದು ಸಾಮಾನ್ಯವಾಗಿ ಮತ್ತೊಬ್ಬರಿಂದ ಕೊಡಲ್ಪಡುವ ಒಂದನ್ನು ತೆಗೆದುಕೊಳ್ಳುವದು ಎಂದರ್ಥವನ್ನು ಕೊಡುತ್ತದೆ.[8] ಕೊಲೊಸ್ಸೆಯವರು ಎಪಫ್ರನಿಂದ ಸಾರಲ್ಪಟ್ಟ ಸಂದೇಶದ ಮೂಲಕ ಯೇಸುವನ್ನು "ಅಂಗೀಕರಿಸಿದ್ದರು." ಅದರ ಫಲಿತವು ಅವರು ಯೇಸುವಿನಲ್ಲಿ ನೆಲೆಗೊಂಡಿರುವದೇ ಆಗಿರತಕ್ಕದ್ದು. ಆತನು ಅವರ ಜೀವಿತಗಳ ಆರಂಭ ಸ್ಥಾನವೂ ಮತ್ತು ಕೇಂದ್ರಬಿಂದುವೂ ಆಗಿದ್ದನು. ಅವರು ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವ ಮೂಲಕ ಆತನಲ್ಲಿ ನೆಲೆಗೊಳ್ಳುವವರಾಗಿದ್ದರು (1 ಯೋಹಾನ 2:3). ಅವರು ಆತನೊಂದಿಗೆ ನಡೆಯುವದಷ್ಟೇ ಆಗಿರಬಾರದಿತ್ತು ಆದರೆ ಆತನಲ್ಲಿ ಸಹ ನಡೆಯಬೇಕಿತ್ತು; ಆತನು ಅವರ ನಡೆಯುವಿಕೆ ಮಾನದಂಡಗಳನ್ನು ನೇಮಿಸಿದ್ದನು. ಕ್ರೈಸ್ತ ನಡೆಯುವಿಕೆಯು ಆತನೊಂದಿಗೆ ಆಗಿದೆ, ಹೊರತು ಆತನನ್ನು ಬಿಟ್ಟು ಅಲ್ಲ.

ಬಹುಶಃ ಪವಿತ್ರಾತ್ಮನು, ಪೌಲನ ಮೂಲಕ, ನಂತರದಲ್ಲಿ ಗ್ನಾಸ್ಟಿಕ್.ರು ಕಲಿಸಬಹುದಾದ ಸುಳ್ಳು ಕಲ್ಪನೆಗಳಿಗೆ ಉತ್ತರಿಸುವದಕ್ಕೆ ಅತ್ಯಂಥ ಪ್ರಯೋಜನಕರವಾಗಿರಬಲ್ಲ ಸಂದೇಶವೊಂದನ್ನು ಕೊಡುವವನಾಗಿದ್ದನೆಂದು ತೋರುತ್ತದೆ. A. T. Robertson ಹೀಗೆ ಹೇಳುತ್ತಾನೆ,

> ಆತನು ಸರ್ವರ ಕರ್ತನಾಗಿದ್ದು, ಎಲ್ಲಾ ರಜತ್ವ ಮತ್ತು ಅಧಿಕಾರಗಳ ಮೇಲಿರುವವನಾಗಿದ್ದಾನೆ (ಎಫೆಸ 1:21). ಸೆರಿಂಥಿಯದ ಗ್ನಾಸ್ಟಿಕ್‌ರು ಪ್ರಥಮ ಶತಮಾನದ ಅಂತ್ಯದ ಹೊತ್ತಿನಲ್ಲಿ ಮನುಷ್ಯನಾದ ಯೇಸು ಮತ್ತು ದೀಕ್ಷಾಸ್ನಾನದ ವೇಳೆ ಆತನ ಮೇಲೆ ಬಂದು ಬಳಿಕ ಶಿಲುಬೆ ಮೇಲಿರುವಾಗ ಆತನನ್ನು ತೊರೆದು ಹೋದ *aeon* ಕ್ರಿಸ್ತನ ನಡುವೆ ಒಂದು ತೀಕ್ಷ್ಣವಾದ ಭಿನ್ನತೆಯನ್ನು ಮಾಡಿದರು. ಕೊಲೊಸ್ಸೆಯಲ್ಲಿ ಈ ಸಿದ್ಧಾಂತದ ಒಂದು ಮುನ್ಸೂಚನೆ ಇದ್ದಿರಬಹುದಾಗಿದೆ. ಪೌಲನು ಇಲ್ಲಿ ಒತ್ತಿ ಹೇಳುತ್ತಿರುವದು ಕೇವಲ ಯೇಸು ಮತ್ತು ಕ್ರಿಸ್ತನ ಗುರುತಿನ ವಿಚಾರವಲ್ಲ ಆದರೆ ಆತನ ಮನಸ್ಸಿನಲ್ಲಿ ನೇರವಾಗಿ ಮೆಸ್ಸೀಯತ್ವವು ಇರುತ್ತದೋ ಅಥವಾ ಇಲ್ಲವೋ, ಇಲ್ಲಿ ಆತನು ಯೇಸುವಿನ ಕರ್ತತ್ವ ಮತ್ತು ನಾಯಕತ್ವದ ಬಗ್ಗೆ ಒತ್ತಿ ಹೇಳುತ್ತಿದ್ದಾನೆ. ಪೌಲನಿಗಾದರೋ ಆತನು ಪೌರಾಣಿಕ ಕ್ರಿಸ್ತನಾಗಲಿ ಅಥವಾ ಐತಿಹಾಸಿಕವಲ್ಲದ ಯೇಸು ಆಗಿರಲಿಲ್ಲ. ಜನರು ಇತಿಹಾಸದ ಯೇಸುವನ್ನು ಗುರುತಿಸಿಕೊಂಡಿದ್ದರು ಮತ್ತು ಆತನನ್ನು ದೇವರೆಂದು ಅಂಗೀಕರಿಸಿಕೊಂಡಿದ್ದರು.[9]

6 ಮತ್ತು 7 ವಚನಗಳಲ್ಲಿ ಐದು ರೂಪಕೋಕ್ತಿಗಳು ಬಳಸಲ್ಪಟ್ಟಿವೆ. (1) ಯೇಸುವಿನಲ್ಲಿದ್ದವರಾಗಿ "ನಡೆದುಕೊಳ್ಳಿರಿ" ಎಂದು ಸಲಹೆ ಮಾಡಲ್ಪಟ್ಟಿರುವದು ಯೇಸುವೇ ನಡೆಯಲು ಮಾರ್ಗ ಎಂಬದಾಗಿ ಸೂಚಿಸುತ್ತದೆ. (2) "ಬೇರೂರಿಕೊಂಡು" ಎಂಬುದು ಒಂದು ಗಿಡವು ಪೋಷಣೆ ಮತ್ತು ಬಲಕ್ಕಾಗಿ ತನ್ನ ಬೇರುಗಳನ್ನು ಆಳಕ್ಕೆ ಬಿಡುವದು

ಎಂಬ ಅರ್ಥವನ್ನು ಕೊಡುತ್ತದೆ. (3) "ಭಕ್ತಿವೃದ್ಧಿಯನ್ನು ಹೊಂದಿ" ಎಂಬುದು ಒಂದು ಉತ್ತಮವಾಗಿ ಕಟ್ಟಲ್ಪಟ್ಟಿರುವ ಕಟ್ಟಡದ ಬಲವನ್ನು ಸೂಚಿಸುತ್ತದೆ. (4) "ನೆಲೆಗೊಂಡು" ಎಂಬುದು ಅವರು ನಂಬಿಕೆಯಲ್ಲಿ ಚೆನ್ನಾಗಿ ಸ್ಥಾಪಿತಗೊಂಡಿದ್ದರು ಎಂಬದನ್ನು ತೋರಿಸುತ್ತದೆ. (5) "ಬೋಧಿಸಲ್ಪಟ್ಟ" ಎಂಬುದು ಅವರಿಗೆ ಮುಂಚೆ ಹೇಳಲಾದ ನಾಲ್ಕು ಕಾರ್ಯಗಳನ್ನು ಸಾಧಿಸುವದಕ್ಕೆ ಅಗತ್ಯವಾಗಿದ್ದ ಮಾಹಿತಿಯು ಇತ್ತು ಎಂಬದ ತಿಳಿಯಪಡಿಸುತ್ತದೆ.

ಸಾರಾಂಶದಲ್ಲಿ, ಪೌಲನ ಬುದ್ಧಿವಾದವು ಏನಾಗಿತ್ತೆಂದರೆ . . .

ನೀವು ಕ್ರಿಸ್ತನನ್ನು ಅಂಗೀಕರಿಸಿದಂತೆಯೇ "ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ" (ವ. 6).

ಬೇರೂರಿಕೊಂಡವರಾಗಿದ್ದು "ಭಕ್ತಿವೃದ್ಧಿಯನ್ನು ಹೊಂದಿರಿ" (ವ. 7).

ನಿಮಗೆ ಬೋಧಿಸಲ್ಪಟ್ಟ ಪ್ರಕಾರವೇ "ನಂಬಿಕೆಯಲ್ಲಿ ನೆಲೆಗೊಳ್ಳಿರಿ" (ವ. 7).

## "ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ"

**ನಡೆದುಕೊಳ್ಳಿರಿ** (περιπατέω, *peripateō*) ಎಂಬುದು ಯೇಸು ಸಮುದ್ರದ ದಡದಲ್ಲಿ ನಡೆಯುವ ವೇಳೆ ಆತನ ಶಾರೀರಿಕ ಚಲನೆಯನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ (ಮತ್ತಾಯ 4:18). ಒಂದು ಆತ್ಮೀಕ ಅರ್ಥದಲ್ಲಿ, "ನಡೆದುಕೊಳ್ಳಿರಿ" ಎಂಬುದು ಮಂಡಲವೊಂದರಲ್ಲಿ ಪ್ರಗತಿ ಸಾಧಿಸುವದು ಎಂಬರ್ಥವನ್ನು ಕೊಡುತ್ತದೆ. ನಡೆಯುವದವಂಥದ್ದು ಕತ್ತಲೆಯಲ್ಲಿ (ಯೋಹಾನ 8:12) ಸಂಭವಿಸಬಹುದು, ಹಗಲು ಅಥವಾ ರಾತ್ರಿಯಲ್ಲಿ (ಯೋಹಾನ 11:9, 10), ಬೆಳಕಿನಲ್ಲಿ (ಯೋಹಾನ 12:35), ಹೊಸ ಜೀವನದಲ್ಲಿ (ರೋಮಾ 6:4), ಶರೀರಭಾವಕ್ಕನುಸಾರವಾಗಿ (ರೋಮಾ 8:4), ನಂಬುವವರಾಗಿ (2 ಕೊರಿಂಥ 5:7), ಪವಿತ್ರಾತ್ಮನ ಅನುಸಾರವಾಗಿ (ಗಲಾತ್ಯ 5:16), ಪಾಪದಲ್ಲಿ (ಎಫೆಸ 2:1, 2), ಸತ್ಕಾರ್ಯ ಮಾಡುವವರಾಗಿ (ಎಫೆಸ 2:10), ಪ್ರೀತಿಯಲ್ಲಿ (ಎಫೆಸ 5:2), ಅಕ್ರಮವಾದ ರೀತಿಯಲ್ಲಿ (2 ಥೆಸಲೋನಿಕ 3:11; KJV), ಮತ್ತು ಸತ್ಯದಲ್ಲಿ (2 ಯೋಹಾನ 4) ನಡೆಯಬಹುದಾಗಿದೆ. ಪೌಲನು "ನಡೆದುಕೊಳ್ಳಿರಿ" ಈ ಎಂಬದಕ್ಕೆ ಪತ್ರಿಕೆಯಲ್ಲಿ ನಾಲ್ಕು ಸಾರಿ ಗ್ರೀಕ್ ಪದವನ್ನು ಕ್ರೈಸ್ತ ಜೀವಿತದ ಚಲನೆಯೆಂಬ ಅರ್ಥದಲ್ಲಿ ಬಳಸಿದನು (1:10; 2:6; 3:7; 4:5; KJV). ಕ್ರೈಸ್ತರು ನಂಬಿಕೆಯಲ್ಲಿ ದೃಢವಾಗಿ ನಿಲ್ಲುವಂತೆ ಹೇಳಲ್ಪಟ್ಟಿರುತ್ತಾರೆ (1 ಕೊರಿಂಥ 16:13) ಮತ್ತು ಕ್ರಿಸ್ತನಲ್ಲಿ ಸ್ಥಿರಚಿತ್ತದಿಂದ ನಡೆಯಿರಿ ಎಂದು ಹೇಳಲ್ಪಟ್ಟಿದ್ದಾರೆ, ಆದರೆ ಎಂದಿಗೂ ಕದಲದೆ ಒಂದೇ ಕಡೆಯಲ್ಲಿ ಕುಳಿತುಕೊಳ್ಳಿರಿ ಎಂದಂತೂ ಹೇಳಲ್ಪಟ್ಟಿಲ್ಲ.

ಕೊಲೊಸ್ಸೆಯವರು ಯೇಸುವನ್ನು ಸ್ವೀಕರಿಸಿಕೊಂಡ ವೇಳೆಯಲ್ಲಿ ಅವರಲ್ಲಿದ್ದ ಅದೇ ವಿಶ್ವಾಸ ಮತ್ತು ಭರವಸೆಯೊಂದಿಗೆ ನಡೆಯಬೇಕಾಗಿತ್ತು. ಅವರು ಆತನಲ್ಲಿ ಪ್ರವೇಶಿಸಿದ್ದರೆ ಮಾತ್ರವೇ ಆತನಲ್ಲಿದ್ದವರಾಗಿ ನಡೆದುಕೊಳ್ಳಲು ಶಕ್ತರಾಗುವವರಾಗಿದ್ದರು. ಅವರು ಆತನಲ್ಲಿ ನಂಬಿಕೆಯಿಟ್ಟವರಾಗಿ, ದೀಕ್ಷಾಸ್ನಾನದಲ್ಲಿ ಆತನ ಸಂಗಡ ಹೂಣಲ್ಪಟ್ಟು ಪುನರುತ್ಥಾನಗೊಂಡ ವೇಳೆ ಆತನನ್ನು ಸೇರಿಕೊಂಡವರಾಗಿದ್ದರು (ರೋಮಾ 6:3, 4; ಗಲಾತ್ಯ 3:26, 27). ಒಮ್ಮೆ ಆತನಲ್ಲಿ ಸೇರಿದ ಬಳಿಕ, ಆತನು ನಡೆದ ರೀತಿಯಲ್ಲಿಯೇ ಅವರು ನಡೆಯಬೇಕಿತ್ತು (1 ಯೋಹಾನ 1:6).

## ಆತನ ಪ್ರೋತ್ಸಾಹ: ಕ್ರಿಸ್ತನಲ್ಲಿ ಭಕ್ತಿವೃದ್ಧಿಯನ್ನು ಹೊಂದುವದು (2:7)

**[7]ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರಮಾಡುವವರಾಗಿರಿ.**

### "ಬೇರೂರಿಕೊಂಡು"

ಕ್ರೈಸ್ತರಿಗೆ ಏನು ಅಗತ್ಯವಿರುತ್ತದೆಂಬದನ್ನು ದೃಷ್ಟಾಂತಪಡಿಸುವದಕ್ಕೆ ಆತನು ಮೂರು ಕೃದಂತಗಳನ್ನ ಬಳಸಿದನು: ಬೇರೂರಿಕೊಂಡು, "ಭಕ್ತಿವೃದ್ಧಿ ಹೊಂದಿ," ಮತ್ತು "ನೆಲೆಗೊಂಡು."

"ಬೇರೂರಿಕೊಂಡು" (ῥιζόω, *hrizoō* ಎಂಬದರಿಂದ ಬಂದ ἐρριζωμένοι, *errizōmenoi*) ಎಂಬುದು "ಬೇರೂರಿಕೊಳ್ಳುವಂತೆ ಮಾಡುವದು" ಎಂದರ್ಥವನ್ನು ಕೊಡುತ್ತದೆ. ಈ ಪದವು ದೃಢವಾಗಿ ನೆಲೆಗೊಂಡಿರುವದನ್ನು ಸೂಚಿಸುವದಕ್ಕೆ ಬಹಳಷ್ಟು ಸಾರಿ ಸಾಂಕೇತಿಕವಾಗಿ ಬಳಸಲ್ಪಟ್ಟಿರುತ್ತದೆ. ಇದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮತ್ತು ಎಫೆಸ 1:17ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಒಂದು ಪರಿಪೂರ್ಣ ನಿಷ್ಕ್ರಿಯ ಕೃದಂತವಾಗಿ, "ಬೇರೂರಿಕೊಂಡು" ಎಂಬುದು ಗತಕಾಲದಲ್ಲಿ ಪೂರ್ಣಗೊಳಿಸಲ್ಪಟ್ಟ ಆದರೆ ನಿರಂತರವಾದ ಫಲಿತವನ್ನು ಹೊಂದಿರುವ ಒಂದು ಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಯೇಸುವನ್ನು ಅಂಗೀಕರಿಸಿಕೊಂಡು ಆತನಲ್ಲಿ ಪ್ರವೇಶಿಸುವ ಮೂಲಕ, ಪೌಲನ ವಾಚಕರು ಯೇಸುವಿನಲ್ಲಿ ಬೇರೂರಿದ್ದರು. ಯೇಸುವಿನೊಂದಿಗೆ ಈ ಸಂಬಂಧವನ್ನು ಮುಂದುವರೆಸುವವರಾಗಿ, ಅವರು ಆತನಲ್ಲಿ ಬೇರೂರಿಕೊಂಡು ಉಳಿಬೇಕಾಗಿತ್ತು.

ಬಹುತೇಕ ಗಿಡಗಳು ಬೆಳೆಯುವಂತೆ ಮತ್ತು ದೃಢವಾಗಿ ನೆಲದಲ್ಲಿ ನಿಂತಿರುವಂತಾಗಲು ಅವುಗಳಿಗೆ ಎರಡು ಸಂಗತಿಗಳ ಅಗತ್ಯವಿರುತ್ತದೆ. ಮೊದಲನೆಯದಾಗಿ, ಅವುಗಳು ತಮ್ಮ ಬೇರುಗಳನ್ನು ಒಳ್ಳೇಯ ನೆಲದಲ್ಲಿ ಇಳಿಯ ಬಿಡಬೇಕಾಗುತ್ತದೆ. ಎರಡನೆಯದಾಗಿ, ಅವುಗಳು ನೆಲದಿಂದ ಸಿಕ್ಕುವ ಪೌಷ್ಠಿಕತೆಯಿಂದ ಬೆಳೆಯತಕ್ಕದ್ದು. ಬೇರುಗಳು ಸ್ಥಿರತೆಯನ್ನು ಮತ್ತು ಬೆಳವಣಿಗೆಯನ್ನು ಒದಗಿಸುತ್ತವೆ. ಕ್ರೈಸ್ತರು ಕ್ರಿಸ್ತನಲ್ಲಿ ದೃಢವಾಗಿ ಬೇರೂರಿತಕ್ಕದ್ದು, ಹೀಗೆ ಅವರು ಆತನಲ್ಲಿ ಸಿಕ್ಕುವ ಪೌಷ್ಠಿಕತೆಯಿಂದ ಬೆಳೆಯಲು ಮತ್ತು ಭಕ್ತವೃದ್ಧಿಗೊಳ್ಳುವದಕ್ಕೆ ಶಕ್ತರಾಗುತ್ತಾರೆ. ನಾವು ಯೇಸುವಿನಲ್ಲಿ ದೃಢವಾಗಿ ನೆಡಲ್ಪಟ್ಟಿದ್ದರೆ, ನಾವು ಸುಲಭವಾಗಿ ಕೀಳಲ್ಪಡಲಾರೆವು. ಕೊಲೊಸ್ಸೆಯವರು ಪಥ ಬದಲಿಸಿದವರಾಗಿದ್ದಾಗ್ಯೂ, ಅವರು ಆರಂಭಿಸಿದ ಜೀವಿತದಲ್ಲಿ ಬೆಳೆಯುವದನ್ನು ಮುಂದುವರೆಸುವಂತೆ ಪೌಲನು ಅವರನ್ನು ಪ್ರೋತ್ಸಾಹಿಸುವದಕ್ಕೆ ಬಯಸಿದನು.

### "ಭಕ್ತಿವೃದ್ಧಿಯನ್ನು ಹೊಂದಿ"

ಭಕ್ತಿವೃದ್ಧಿಯನ್ನು ಹೊಂದಿ (ἐποικοδομούμενοι, *epoikodomoumenoi*) ಎಂಬುದು ಒಂದು ಕಟ್ಟಡವನ್ನು ನಿರ್ಮಿಸುವದು, ಕೆಲವೊಂದು ಗುಣಗಳನ್ನು ಬೆಳೆಸಿಕೊಳ್ಳುವದು, ಅಥವಾ ಒಂದು ಗುರಿಯನ್ನು ಅನುಸರಿಸುತ್ತಿರುವ ಜನರ ಸಂಖ್ಯೆಯನ್ನು ಹೆಚ್ಚಳಗೊಳಿಸುವದು ಎಂಬದನ್ನು ಸೂಚಿಸುತ್ತದೆ. ಪೌಲನು ಈ ಪದವನ್ನು ಮತ್ತೊಬ್ಬರು

ಹಾಕಿದ ಅಸ್ತಿವಾರದ ಮೇಲೆ ಕಟ್ಟುವದು ಮತ್ತು ಒಂದು ಸಹಕಾರದಿಂದ ಕೂಡಿದ ಪ್ರಯಾಸವನ್ನು ಸೂಚಿಸುವದಕ್ಕಾಗಿ ಬಳಸಿದನು (1 ಕೊರಿಂಥ 3:10-14). ಎಫೆಸ 2:20ರಲ್ಲಿ, ರೂಪಕಾರ್ಥದಲ್ಲಿ, ಅದು ಇತರರನ್ನು ಯೇಸುವಿನ ಸಭೆಯ ಭಾಗವಾಗಿ ಕರೆತರುವದನ್ನು ಸೂಚಿಸುತ್ತದೆ. ಒಂದು ಆತ್ಮೀಕ ಕಟ್ಟಡವನ್ನು ಕಟ್ಟುವದನ್ನ ಸೂಚಿಸುವದಕ್ಕಾಗಿ ಪೇತ್ರನು ಅದೇ ಪದವನ್ನು ಬಳಸಿದನು (1 ಪೇತ್ರ 2:5), ಮತ್ತು ಯೂದನು ಅದನ್ನು ನಂಬಿಕೆಯಲ್ಲಿ ಅಭಿವೃದ್ಧಿಗೊಳ್ಳುವದಕ್ಕೆ ಅನ್ವಯಿಸುತ್ತಾನೆ (ಯೂದನು 20).

ಒಂದು ವರ್ತಮಾನಕಾಲ ಕೃದಂತವಾಗಿ, "ಭಕ್ತಿವೃದ್ಧಿಯನ್ನು ಹೊಂದಿ" ಎಂಬುದು ಮುಂದುವರೆದಿರುವ ಕ್ರಿಯೆಯನ್ನು ಸೂಚಿಸುತ್ತದೆ. ಕೊಲೊಸ್ಸೆಯವರು ದೃಢವಾಗಿ ಬೇರೂರಿರಬೇಕಾಗಿತ್ತು ಮತ್ತು ದೃಢವಾಗಿ ಬೇರೂರಿರುವದನ್ನು ಮುಂದುವರೆಸಬೇಕಿತ್ತು. ಈ ನೆಲೆಯಿಂದ, ಅವರು ಯೇಸುವಿನಲ್ಲಿ "ಭಕ್ತಿವೃದ್ಧಿ ಹೊಂದುವದನ್ನು" ಮುಂದುವರೆಸುವದಕ್ಕೆ ಸಾಧ್ಯವಿತ್ತು.

ಕ್ರೈಸ್ತರು ದೇವರ ಕಟ್ಟಡವಾಗಿದ್ದು, ಅಪೊಸ್ತಲರು, ಪ್ರವಾದಿಗಳು, ಮತ್ತು ಮೂಲೆಗಲ್ಲಾಗಿರುವ ಯೇಸುವಿನ ಮೇಲೆ ಕಟ್ಟಲ್ಪಡುತ್ತಾ ಇರುವವರಾಗಿದ್ದಾರೆ (1 ಕೊರಿಂಥ 3:9, 11; ಎಫೆಸ 2:20, 21). ಶಿರಸ್ಸಾಗಿರುವ ಯೇಸುವಿನಿಂದ, ಮತ್ತು ಸದಸ್ಯರಿಂದ, ಸಭೆಯು ಕಟ್ಟಲ್ಪಡುತ್ತಾ ಸಾಗುತ್ತದೆ (ಎಫೆಸ 4:12, 16; 1 ಥೆಸಲೋನಿಕ 5:11; 1 ಪೇತ್ರ 2:5). ಪ್ರವೀಣತೆಯನ್ನು ಸಾಧಿಸಬೇಕೆಂದರೆ, ಕ್ರೈಸ್ತರು ಆತನಲ್ಲಿ ನೆಲೆಗೊಳ್ಳತಕ್ಕದ್ದು ಮತ್ತು ಆತನಲ್ಲಿ ಸಿಕ್ಕುವ ಜ್ಞಾನದ ಮೂಲಕವಾಗಿ ನಿರಂತರವಾಗಿ ವಿನೂತನಗೊಳ್ಳುತ್ತಿರತಕ್ಕದ್ದು (ಕೊಲೊಸ್ಸೆ 3:10). ಕ್ರಿಸ್ತನಿಗೆ ನಿಷ್ಠೆಯಿಂದ ಇರುವದು ಮತ್ತು ಆತನೊಂದಿಗೆ ನಿಕಟವಾದ ಸಂಬಂಧವನ್ನಿಟ್ಟುಕೊಳ್ಳುವದು ಆತ್ಮೀಕ ಪಕ್ವತೆಗಾಗಿ ಸಾರಭೂತವಾಗಿರುತ್ತವೆ. **ಆತನಲ್ಲಿದ್ದವರಾಗಿ** ಎಂಬುದು ಆತ್ಮೀಕ ಜೀವದ ಮೂಲ ಮತ್ತು ನಂಬಿಕೆಯಲ್ಲಿ ಸಹೋದರರನ್ನು ದೃಢವಾಗಿ ಹಿಡಿದಿಟ್ಟುಕೊಳ್ಳುವ ಜೋಡಣೆ ಎಂಬದನ್ನು ಸೂಚಿಸುತ್ತದೆ. ನಾವು ಆತನಲ್ಲಿ ಭಕ್ತಿವೃದ್ಧಿಯನ್ನು ಹೊಂದುವದಾದರೆ, ನಮಗೆ ಆತನ ಬಲವು ದೊರಕುತ್ತದೆ ಮತ್ತು ನಾವು ಆತ್ಮೀಕವಾಗಿ ಸುಲಭವಾಗಿ ಬೀಳಿಸಲ್ಪಡುವದಿಲ್ಲ ಅಥವಾ ನಾಶಗೊಳಿಸಲ್ಪಡುವದಿಲ್ಲ.

ಆತ್ಮೀಕ ಅಭಿವೃದ್ಧಿಯು ಯೇಸುವಿನಿಂದ ಬರುತ್ತದಾದ್ದರಿಂದ, ಕೊಲೊಸ್ಸೆಯವರು ಭಕ್ತವೃದ್ಧಿಯನ್ನು ಹೊಂದಿಕೊಳ್ಳಲು ಬೇರೆ ಯಾವದೇ ದಾರಿಯನ್ನು ಹುಡುಕಾಡಬೇಕಾದ ಅಗತ್ಯವಿರಲಿಲ್ಲ. ಅವರು ಯಾರಲ್ಲಿ ನೆಡಲ್ಪಟ್ಟಿದ್ದಾರೋ ಆತನಲ್ಲಿಯೇ ತಮ್ಮ ಬೆಳವಣಿಗೆಯನ್ನು ಹುಡುಕಿಕೊಳ್ಳಬೇಕಾಗಿತ್ತು. ಕ್ರಿಸ್ತನಲ್ಲಿ ಬೇರೂರಿಕೊಂಡು ಇರುವದೆಂದರೆ ಅವರ ಬೆಳವಣಿಗೆಯು ಆತನಿಂದಲೇ ಬರತಕ್ಕದ್ದು ಎಂಬರ್ಥವಾಗಿದೆ. ಯೇಸುವು ಅವರ ಅಸ್ತಿವಾರವಾಗಿ ಆತನ ಮೇಲೆ ಅವರು ಕಟ್ಟಲ್ಪಡುತ್ತಿದ್ದರಾದ್ದರಿಂದ, ಅವರಿಗೆ ಸ್ಥಿರತೆ ಇರುವದಾಗಿತ್ತು ಮತ್ತು ಆ ಅಸ್ತಿವಾರವನ್ನು ಪದೇ ಪದೇ ಹಾಕುವ ಅಗತ್ಯವಿರಲಿಲ್ಲ (ಇಬ್ರಿಯ 6:1).

ಆತ್ಮೀಕ ಪ್ರವೀಣತೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಬೇರೊಂದು ದಾರಿಯಿರುತ್ತದೋ? ಸಭೆಯ ಆಚಾರಗಳು ಮತ್ತು ಪವಿತ್ರಾತ್ಮನಿಂದ ಬರುವಂಥವುಗಳೆಂದು ಹೇಳಲಾಗುವ ಭಾವೋದ್ರೇಕದ-ಚಟುವಟಿಕೆಗಳು ಕ್ರಿಸ್ತನಲ್ಲಿ

ಬೆಳೆಯುವದಕ್ಕೆ ದಾರಿಗಳಾಗಿರುವದಿಲ್ಲ. ಆತ್ಮೀಕವಾಗಿ ಲಾಭ ಹೊಂದಿಕೊಳ್ಳುವದಕ್ಕೆ ಈ ದಾರಿಗಳನ್ನು ಆರಿಸಿಕೊಳ್ಳುವವರು ಎಲ್ಲಾ ಆತ್ಮೀಕ ಬೆಳವಣಿಗೆಗೆ ಯೇಸುವೇ ಮೂಲನು ಎಂಬದನ್ನು ಗ್ರಹಿಸಿಕೊಳ್ಳಲು ವಿಫಲರಾಗುತ್ತಾರೆ.

## "ನಿಮಗೆ ಬೋಧಿಸಲ್ಪಟ್ಟ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು"

ನೆಲೆಗೊಂಡು (βεβαιούμενοι, *bebaioumenoi*) ಎಂಬುದರ ಪ್ರಾಥಮಿಕ ಅರ್ಥವೇನೆಂದರೆ "ಯಾವ ಸಂಶಯವೂ ಇಲ್ಲದಂತೆ ಸಾಭಿತುಪಡಿಸಲ್ಪಟ್ಟವರು" ಎಂಬದೆ. ಅಂಥ ಪುರಾವೆಗೆ ಒಂದು ಉದಾಹರಣೆಯೆಂದರೆ ವಾಕ್ಯವು ಸಾರಲ್ಪಡುತ್ತಿರುವಂತೆಯೇ ಅದನ್ನು ಸೂಚಕಕಾರ್ಯಗಳಿಂದ ದೃಢೀಕರಿಸುವದು (ಮಾರ್ಕ 16:20). ದೃಢೀಕರಿಸಲ್ಪಟ್ಟ ವಾಗ್ದಾನಗಳು ಸತ್ಯವೆಂದು ಸೂಚಿಸುವದಕ್ಕೆ (ರೋಮಾ 15:8) ಮತ್ತು ಕ್ರಿಸ್ತನ ವಿಷಯವಾದ ಸಾಕ್ಷಿಯನ್ನು ಪ್ರಮಾಣೀಕರಿಸಲು ಸಹ ಈ ಪದವು ಬಳಸಲ್ಪಡುತ್ತದೆ (1 ಕೊರಿಂಥ 1:6). ಪವಿತ್ರಾತ್ಮನು ಕೊರಿಂಥದವರಿಗೆ ಅದ್ಭುತಕರವಾದ ವರಗಳನ್ನು – ಪೌಲನ ನಿಜವಾದ ಅಪೊಸ್ತಲತನಕ್ಕೆ ಸಂಕೇತವಾಗಿ – ಅನುಗ್ರಹಿಸಿದನು (1 ಕೊರಿಂಥ 9:1, 2; 12:4-11; 2 ಕೊರಿಂಥ 12:12). ಜನರನ್ನು ದೃಢತೀರ್ಮಾನದಿಂದಿರುವಂತೆ, ಮನವರಿಕೆಗಳಲ್ಲಿ ಮತ್ತು ಉದ್ದೇಶದಲ್ಲಿ ಅಚಲರಾಗಿರುವಂತೆ ಮಾಡುವದಕ್ಕೆ ಸಹ "ನೆಲೆಗೊಂಡು" ಎಂಬ ಪದವು ಬಳಸಲ್ಪಡುತ್ತದೆ (1 ಕೊರಿಂಥ 1:8; 2 ಕೊರಿಂಥ 1:21; ಇಬ್ರಿಯ 13:9).

ಕೊಲೊಸ್ಸೆಯವರು [ತಮಗೆ] **ಬೋಧಿಸಲ್ಪಟ್ಟ ಪ್ರಕಾರವೇ ನಂಬಿಕೆಯಲ್ಲಿ** ನೆಲೆಗೊಂಡಿದ್ದರು. "ನಿಮ್ಮ ನಂಬಿಕೆಯಲ್ಲಿ" ಎಂಬದರ ಬದಲಾಗಿ, ಗ್ರೀಕ್ ವಾಕ್ಯವು τῇ πίστει (*tē pistei*) ಎಂಬದನ್ನು ಹೊಂದಿರುತ್ತದೆ, ಅದರರ್ಥವು 1:23ರಲ್ಲಿರುವಂತೆಯೇ "ನಂಬಿಕೆಯಲ್ಲಿ" ಎಂದಾಗಿರುತ್ತದೆ. "ನಂಬಿಕೆಯಲ್ಲಿ" ಎಂದು ಹೇಳುವ ಮೂಲಕ, ಪೌಲನ ತಾತ್ಪರ್ಯವು ಕ್ರೈಸ್ತ ಬೋಧನೆಯ ಇಡೀ ಮುಖ್ಯಭಾಗ, ಕ್ರೈಸ್ತರು ನಂಬಬೇಕಾಗಿರುವ ಪ್ರಕಟಗೊಂಡ ಸತ್ಯ ಎಂದಾಗಿರುತ್ತದೆ.

"ಬೋಧಿಸಲ್ಪಟ್ಟ" (διδάσκω, *didaskō*) ಎಂಬುದು ಬೋಧನೆ ಅಥವಾ ಒಬ್ಬನಿಗೆ ಏನು ಮಾಡತಕ್ಕದ್ದೆಂದು ಹೇಳುವದನ್ನು ಸೂಚಿಸುವದಕ್ಕೆ ಬಳಸುವ ಸಾಮಾನ್ಯವಾದ ಪದವಾಗಿರುತ್ತದೆ (ಮತ್ತಾಯ 4:23; 28:15). ತಾವು ದೇವರ ವಾಕ್ಯದಿಂದ ಕಲಿತುಕೊಂಡ ಬೋಧನೆಯಲ್ಲಿ ಕೊಲೊಸ್ಸೆಯವರು ನೆಲೆಗೊಂಡಿರಬೇಕೆಂಬುದು ಪೌಲನ ಬಯಕೆಯಾಗಿತ್ತು (ರೋಮಾ 10:17). ಅವರು ನಂಬಿಕೆಯಲ್ಲಿ ದೃಢವಾಗಿರಬೇಕಿತ್ತು, ತಾವು ಕೇಳಿದ ಸತ್ಯಗಳ ಮೇಲೆ ತಮ್ಮ ಜೀವಿತಗಳನ್ನು ಕಟ್ಟಿಕೊಳ್ಳಬೇಕಿತ್ತು, ಮತ್ತು ಕಲಿಯುವದನ್ನು ಮುಂದುವರೆಸಬೇಕಿತ್ತು. ಅವರು ತಮ್ಮ ನಂಬಿಕೆಯಲ್ಲಿ ನೆಲೆಗೊಂಡು ಇರುವದಾಗಿದ್ದಲ್ಲಿ, ಅವರು ಸುಳ್ಳು ಬೋಧನೆಯಿಂದ ಸುಲಭವಾಗಿ ಮನವೊಲಿಸಲ್ಪಡುವದಕ್ಕಾಗಲಿ ಅಥವಾ ನಂಬಿಕೆಯಿಂದ ಶೀಘ್ರವಾಗಿ ದಾರಿತಪ್ಪಿಸಲ್ಪಡುವದಕ್ಕೆ ಸಾಧ್ಯವಿರಲಿಲ್ಲ.

ಎಪಫ್ರನು ಅವರಿಗೆ ಸರಿಯಾದ ರೀತಿಯಲ್ಲಿ ಬೋಧನೆಯನ್ನು ಮಾಡಿದ್ದನು. ಈ ಬೋಧನೆಯನ್ನು ಬಿಟ್ಟು ಹೋಗುವ ಬದಲಾಗಿ, ಅವರು ಆತ್ಮೀಕವಾಗಿ ಪ್ರವೀಣರಾಗುವದಕ್ಕಾಗಿ ಆತನು ಅವರಿಗೆ ನೀಡಿದ ಬೋಧನೆಯಲ್ಲಿ ಅವರು ಪಟ್ಟು ಬಿಡದೆ ಮುಂದುವರೆಯಬೇಕಿತ್ತು. ಅವರಿಗೆ ಸರಿಯಾದ ಬೋಧನೆ ಮಾಡಲ್ಪಟ್ಟಿತ್ತೋ ಎಂಬ ಸಂಶಯವು ಪೌಲನಿಗಿರಲಿಲ್ಲ ಅಥವಾ ಅವರ ಜೀವನ ಶೈಲಿಯನ್ನು ಆತನು ಪ್ರಶ್ನಿಸಲಿಲ್ಲ.

ಅವರು ಯಾವದನ್ನು ಆರಂಭಿಸಿದ್ದರೋ ಅದರಲ್ಲಿ ಮುಂದುವರೆಯುವಂತೆ ಮತ್ತು ಯೇಸುವಿನಿಂದ ಕೊಡಲ್ಪಟ್ಟಿರುವ ಮಾದರಿಗೆ ಅನುಸಾರವಾಗಿ ತಮ್ಮ ಜೀವಿತಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾ ಸಾಗುವಂತೆ ಆತನು ಅವರನ್ನು ಪ್ರೋತ್ಸಾಹಿಸಿದನು.

ಮನುಷ್ಯನಿಗೆ ಬದುಕುವದಕ್ಕಾಗಿ ದೇವರ ವಾಕ್ಯದ ಅಗತ್ಯವಿರುತ್ತದೆ (ನೋಡಿರಿ ಮತ್ತಾಯ 4:4). ಎಲ್ಲಾ ಶಾಸ್ತ್ರಗಳು ದೈವಪ್ರೇರಿತವಾದವುಗಳೆಂದು ಮತ್ತು ಒಬ್ಬ ಕ್ರೈಸ್ತನನ್ನು "ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವಂತೆ" ಮಾಡಬಲ್ಲ ಸತ್ಯಗಳನ್ನು ಒಳಗೊಂಡಿರುತ್ತದೆಂದು ಪೌಲನು ಬರೆದನು (2 ತಿಮೊಥೆ 3:16, 17). ಈ ವಿಧದಲ್ಲಿ ಪೌಲನು ತಿಮೊಥೆಯನಿಗೆ ದೇವರ ವಾಕ್ಯವನ್ನು ಬೋಧಿಸುವಂತೆಯೂ ಉಪದೇಶಿಸುವಂತೆಯೂ ಬುದ್ಧಿವಾದ ಹೇಳಿದನು (1 ತಿಮೊಥೆ 4:11; 6:2; 2 ತಿಮೊಥೆ 2:2; 4:2). ಅದರ ಮೂಲಕ ಬೆಳವಣಿಗೆ ಉಂಟಾಗುತ್ತದೆಂದು ಪೇತ್ರನು ಕಲಿಸಿದನು (1 ಪೇತ್ರ 2:2). ಕ್ರೈಸ್ತ ದೃಢತೆಗೆ ಮತ್ತು ಪ್ರವೀಣತೆ ಸಾಧಿಸಲು ದೇವರ ವಾಕ್ಯವನ್ನು ಸಾರುವದು ತಳಹದಿಯಾಗಿರುತ್ತದೆ ಮತ್ತು ಆತ್ಮೀಕ ಬಲದ ಮೂಲವಾಗಿರುತ್ತದೆ (ಇಬ್ರಿಯ 4:12).

ಪೌಲನು ವಾಚಕರಿಗೆ ಹೊಸ ಬೋಧನೆಯನ್ನು ಮುಂದಿಡುವವನಾಗಿರಲಿಲ್ಲ. ಅವರು ಅಗತ್ಯವಾಗಿದ್ದ ಸತ್ಯಗಳನ್ನು ಆಗಲೇ ಪಡೆದುಕೊಂಡಿದ್ದರು. ಹೊಸ ಬೋಧನೆಗಳನ್ನು ಹುಡುಕುವ ಬದಲಾಗಿ, ಅವರು ಈಗಾಗಲೇ ಪಡೆದುಕೊಂಡಿದ್ದ ಬೋಧನೆಯ ಮೇಲೆ ಕಟ್ಟಲ್ಪಡಬೇಕಾಗಿತ್ತು. ಅವರಿಗೆ ಮಾಡಲ್ಪಟ್ಟ ಬೋಧನೆಯೊಂದಿಗೆ ಹೊಸ ಬೋಧನೆಯೊಂದು ಸಾಮರಸ್ಯ ಹೊಂದಿಲ್ಲವಾದರೆ ಅದು ಸುಳ್ಳು ಬೋಧನೆಯಾಗುವದು (ನೋಡಿರಿ ಗಲಾತ್ಯ 1:7, 8). ನಾವು ಯೇಸುವಿನಿಂದ ಪ್ರಕಟಗೊಳಿಸಲ್ಪಟ್ಟಿರುವ ಸಿದ್ಧಾಂತದ ಹೊರಗಡೆ ಹೊಸ ಸಿದ್ಧಾಂತವನ್ನು ಹುಡುಕಬಾರದು; ಬದಲಾಗಿ, ಆತನು ತಂದ ಸತ್ಯದಲ್ಲಿ ಪ್ರವೀಣತೆಯನ್ನು ಹೊಂದುವದಕ್ಕೆ ಬೆಳೆಯುತ್ತಾ ಸಾಗಬೇಕು (ಇಬ್ರಿಯ 6:1)

### "ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರಮಾಡುವವರಾಗಿರಿ"

ಅವರ ನಂಬಿಕೆಯ ಗುರಿಯು ಮತ್ತು ಅವರ ನಿರೀಕ್ಷೆಯು ನಿತ್ಯಜೀವವಾಗಿತ್ತಾದ್ದರಿಂದ, ಅವರ ಹೃದಯಗಳು **ಹೆಚ್ಚೆಚ್ಚಾಗಿ** (περισσεύω, *perisseuō*) ಸ್ತೋತ್ರದಿಂದ ತುಂಬಿರಬೇಕಿತ್ತು. ಪುನಃ, ಪೌಲನು ವರ್ತಮಾನಕಾಲ ಕೃದಂಥವನ್ನು ಬಳಸುವವನಾಗಿ ಮುಂದುವರೆದಿರುವ ಕ್ರಿಯೆಯನ್ನು ವ್ಯಕ್ತಪಡಿಸುತ್ತಾನೆ. ಅವರು **ಸ್ತೋತ್ರಮಾಡುವವರಾಗಿ**ರುವದರಲ್ಲಿ "ಅಧಿಕಗೊಳ್ಳಬೇಕು" ಅಥವಾ "ತುಂಬಿ ತುಳಕಬೇಕು" ಎಂಬುದು ಆತನ ತಾತ್ಪರ್ಯವಾಗಿತ್ತು. ಅವರ ಕೃತಜ್ಞತಾಸ್ತುತಿಯು ತುಂಬಿ ತುಳುಕುತ್ತಿದ್ದಾಗ್ಯೂ, ದೇವರಿಗೆ ಕೃತಜ್ಞತೆಯಿಂದಿರುವದನ್ನು ಮುಂದುವರೆಸಬೇಕೆಂದು ಪೌಲನು ಕೊಲೊಸ್ಸೆಯವರನ್ನು ಪ್ರೋತ್ಸಾಹಗೊಳಿಸಿದನು.

ಪರಲೋಕವನ್ನು ಎದುರು ನೋಡುವದರ ಜೊತೆಗೆ, ಕೊಲೊಸ್ಸೆಯವರು ಭಕ್ತಿಜೀವನದಿಂದ ಹೊಂದಿಕೊಳ್ಳುತ್ತಿದ್ದ ಆಶೀರ್ವಾದಗಳಿಗಾಗಿ, ಪಾಪದ ಅಪರಾಧದಿಂದ ಮುಕ್ತರಾದದ್ದಕ್ಕಾಗಿ, ಮತ್ತು ಯೇಸುವಿನ ಹಾಗೂ ಜೊತೆ ಕ್ರೈಸ್ತರೊಂದಿಗಿನ ಅನ್ಯೋನ್ಯತೆಗಾಗಿ ಕೃತಜ್ಞತೆಯುಳ್ಳವರಾಗಿರಬಹುದಾಗಿತ್ತು. ಈ ಅನುಕೂಲಗಳು ದೇವರಿಂದಲೇ ಬಂದವುಗಳು ಮತ್ತು ತನ್ನ ಸ್ವಂತ ಪ್ರಯಾಸಗಳಿಂದಲ್ಲ ಎಂಬ ಗ್ರಹಿಕೆಯು ಎಲ್ಲಾ ಆಶೀರ್ವಾದಗಳಿಗೆ ಮೂಲಕಾರಣನಾದವನನ್ನು ಸ್ತುತಿ ಮಾಡುವಂತೆ ಅವರನ್ನು

ನಡಿಸತಕ್ಕದ್ದು (ಯಾಕೋಬ 1:17). ಕ್ರಿಸ್ತನ ಮೂಲಕ ಅವರಿಗಾದ ಲಾಭವು ಅವರ ಹೃದಯಗಳನ್ನು ವಿನಯವಾದ ಕೃತಜ್ಞತಾಸ್ತುತಿಯಿಂದ ತುಂಬಿಸತಕ್ಕದ್ದು.

ಕೃತಜ್ಞತಾಭಾವನೆಯು ಸಂತೃಪ್ತಿಯನ್ನುಂಟು ಮಾಡುತ್ತದೆ, ಅದು ಸ್ಥಿರಗೊಳಿಸುವಂಥ ಪ್ರಭಾವವನ್ನು ಬೀರುತ್ತದೆ. ತಮಗೆ ಇರುವದರಲ್ಲಿ ಸಂತೋಷವುಳ್ಳವರು ಮತ್ತು ಆನಂದಿಸುವವರು ಅದನ್ನು ಬಿಡದೆ ಹಿಡಿದುಕೊಳ್ಳುತ್ತಾರೆಂಬುದು ಹೆಚ್ಚುಕಡಿಮೆ ಖಚಿತವಾಗಿರುತ್ತದೆ. ಯೇಸು ಬೇರೆ ಯಾವನೂ ಮಾಡದ ರೀತಿಯಲ್ಲಿ ಸಂತೃಪ್ತಗೊಳಿಸುತ್ತಾನೆ ಮತ್ತು ಹೃದಯವನ್ನು ತುಂಬಿಸುತ್ತಾನೆ (ಯೋಹಾನ 4:14). ಕೊಲೊಸ್ಸೆಯವರಿಗೆ ಅವರ ಆತ್ಮೀಕ ಅಗತ್ಯತೆಗಳನ್ನು ಒದಗಿಸುವದಕ್ಕೆ ಮತ್ತು ಅವರ ಹೃದಯಗಳನ್ನು ಕೃತಜ್ಞತಾಸ್ತುತಿಯಿಂದ ತುಂಬಿಸುವದಕ್ಕೆ ಬೇರೆ ಯಾರೂ ಬೇಕಾಗಿರಲಿಲ್ಲ.

ಈ ವಾಕ್ಯಭಾಗದಲ್ಲಿರುವ ಸವಾಲು ಸ್ಪಷ್ಟವಾಗಿರುತ್ತದೆ: ಕೊಲೊಸ್ಸೆಯಲ್ಲಿದ್ದ ಕ್ರೈಸ್ತರಿಗಾಗಿ ಪೌಲನು ಸ್ಥಿರವಾದ ಬೆಳವಣಿಗೆಯನ್ನು ಅಪೇಕ್ಷಿಸಿದನು. R. C. Lucas ಈ ಕೆಳಗಿನಂತೆ ಸಾರಾಂಶಗೊಳಿಸುತ್ತಾನೆ:

> ಹಾಗಾದರೆ ಈ ವಿಭಾಗದಲ್ಲಿ ಮೂರು ಕರೆ ನೀಡುವಿಕೆಗಳು ತೋರಿಸುವದೇನೆಂದರೆ ಪೌಲನು ಸ್ವಸಂತೃಪ್ತಿಯ ಸಮರ್ಥಕನಲ್ಲ ಎಂಬದೆ. ಆತನು ತನ್ನ ವಾಚಕರನ್ನು ಸಂಪೂರ್ಣ ಸ್ಥಿರತೆಯಿಂದ ಕೂಡಿದ ಜೀವಿತ ನಡಿಸುವಂತೆ, ಆತ್ಮೀಕತೆಯ ಉನ್ನತಿಯ ಪೂರ್ಣತೆಗೆ ತಲುಪುವಂತೆ, ಮತ್ತು ಜ್ಞಾನದ ಗ್ರಹಿಕೆಯುಳ್ಳವರಾಗಿರುವಂತೆ ಕರೆ ನೀಡುತ್ತಾನೆ. ಆದರೆ ಅದು ಕ್ರಿಸ್ತನ ರಕ್ಷಣೆಯುಂಟು ಮಾಡುವ ಸುವಾರ್ತೆಯೊಂದಿಗೆ ಸಾಮರಸ್ಯವುಳ್ಳಂಥ ಬೆಳವಣಿಗೆಯಾಗಿರಲಿ.[10]

## ಅನ್ವಯಿಸುವಿಕೆ

### ಕ್ರಿಸ್ತನು, ಜ್ಞಾನ ಮತ್ತು ತಿಳವಳಿಕೆಯ ಮೂಲನು

ನಾವು ಕ್ರಿಸ್ತನ ಮೇಲೆ ನಮ್ಮ ಜೀವಿತಗಳನ್ನು ಕಟ್ಟಿಕೊಳ್ಳಬೇಕೆಂಬುದಕ್ಕಾಗಿ ಪೌಲನು ಕ್ರಿಸ್ತನ ಪ್ರಾಮುಖ್ಯತೆ ಮತ್ತು ಅಧಿಕಾರದ ಬಗ್ಗೆ ಬಲವಾದ ಸಮರ್ಥನೆಯನ್ನು ಮುಂದಿಡುತ್ತಾನೆ. ನಾವು ಪೌಲನ ಮಾದರಿಯನ್ನು ಅನುಸರಿಸುವವರಾಗಬೇಕು ಮತ್ತು ಯೇಸುವಿನ ನಿಜವಾದ ಹಿಂಬಾಲಕರಾಗಿರುವಂತೆ ಜನರಿಗೆ ಬೋಧಿಸುವದಕ್ಕೆ ಕಳಕಳಿ ಹೊಂದಿರಬೇಕು.

ಪೌಲನ ಹಾಗೆಯೇ, ತಮ್ಮ ಜೀವಿತಗಳಲ್ಲಿ ಯೇಸುವು ಎಷ್ಟು ಪ್ರಾಮುಖ್ಯನೆಂಬದನ್ನು ಗ್ರಹಿಸಿಕೊಳ್ಳುವಂತೆ ಜನರನ್ನು ನಡಿಸುವದಕ್ಕೆ ನಾವು ಪ್ರಯಾಸಗಳನ್ನು ತೆಗೆದುಕೊಳ್ಳತಕ್ಕದ್ದು. ಇದರರ್ಥವೇನೆಂದರೆ ನಮ್ಮ ಪ್ರಯಾಸಗಳು ಸಹ ಪೌಲನ ಪ್ರಯಾಸಗಳು ಸಾಗಿದ ದಿಕ್ಕನ್ನೇ ಅನುಸರಿಸುತ್ತವೆಂದಾಗಿರುತ್ತದೆ. ಕ್ರೈಸ್ತರಿಗೆ ಈ ಕೆಳಗಿನವುಗಳು ಸಿಕ್ಕುವಂತಾಗಲು ಆತನು ಹೋರಾಟ ಪಟ್ಟನು:

1. *ಪ್ರೋತ್ಸಾಹಗೊಂಡ ಹೃದಯಗಳು.* ತಮ್ಮ ಸಕ್ರಿಯವಾದ ನಂಬಿಕೆಯ ಪ್ರಗತಿ ಮತ್ತು ಫಲವನ್ನು ನೋಡುವಾಗ ಯಾರ ಹೃದಯಗಳು ಹರ್ಷಗೊಳ್ಳುತ್ತವೋ ಅವರೇ ಸಮರ್ಪಣೆಯುಳ್ಳ ಕ್ರೈಸ್ತರಾಗಿದ್ದಾರೆ. ತನ್ನ ಪ್ರಯಾಸದ ಫಲಿತವಾಗಿದ್ದವರು ಸತ್ಯದಲ್ಲಿ

ನಡೆಯುತ್ತಿದ್ದಾರೆಂಬದನ್ನು ಕೇಳಿದಾಗ ಯೋಹಾನನ ಹೃದಯವು ಸಂತೋಷದಿಂದ ತುಂಬಿತು (3 ಯೋಹಾನ 4).

ಪರಿಸ್ಥಿತಿಗಳು ಕಠಿಣಗೊಂದು ಎಲ್ಲವೂ ವಿಫಲಗೊಳ್ಳುತ್ತಿರುವಂತೆ ತೋರುವಾಗ, ಹೃದಯದಲ್ಲಿ ನಿರಾಶೆಗೊಳ್ಳುವದು ಸುಲಭವಾಗಿರುತ್ತದೆ. ಉತ್ಸಾಹದಿಂದ ಉಳಿಯುವದಕ್ಕಾಗಿ, ನಾವು ನಮ್ಮ ದೃಷ್ಟಿಯನ್ನು ಗುರಿಯ ಮೇಲಿಟ್ಟಿರಬೇಕು, ಅಂತ್ಯದಲ್ಲಿ ನಮ್ಮೆಲ್ಲಾ ಪ್ರಯಾಸಗಳು ಆಶೀರ್ವದಿಸಲ್ಪಡುವವೆಂಬುದನ್ನು ಗ್ರಹಿಸಿಕೊಳ್ಳಬೇಕು. ನಾವು ನಿರಂತರವಾಗಿ ಯೇಸುವಿನ ಸೇವೆ ಮಾಡತಕ್ಕದ್ದು, "ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವದಿಲ್ಲ" ಎಂದು ತಿಳಿಯಬೇಕು ಎಂಬದಾಗಿ ಪೌಲನು ಬರೆಯುತ್ತಾನೆ (1 ಕೊರಿಂಥ 15:58).

ಸಂಕಷ್ಟಗಳು ಎದುರಾಗುವಾಗ, ನಿರಾಶೆಗೊಳ್ಳುವದರ ಬದಲಾಗಿ, ಅವುಗಳಿಂದ ನಮಗೆ ಸಿಕ್ಕುವ ಪ್ರಯೋಜನಗಳ ಕಾರಣದಿಂದ ನಾವು ಪ್ರೋತ್ಸಾಹಗೊಳ್ಳಬೇಕು: ದೃಢನಿಷ್ಠೆಯಲ್ಲಿ, ಗುಣಸ್ವಭಾವದಲ್ಲಿ, ಮತ್ತು ನೀತಿಯಲ್ಲಿ ಅಭಿವೃದ್ಧಿ (ರೋಮಾ 5:3, 4; ಯಾಕೋಬ 1:2; ಇಬ್ರಿಯ 12:11). ಸಂಕಟಗಳ ಅರ್ಥವು ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ತನ್ನ ಬಳಕೆಗಾಗಿ ನಮ್ಮನ್ನು ಉತ್ತಮ ಸಾಧನಗಳನ್ನಾಗಿ ರೂಪಿಸುವದಕ್ಕೆ ಕಾರ್ಯಮಾಡುತ್ತಿದ್ದಾನೆ ಎಂದಾಗಿರಬಲ್ಲದು. "ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ; ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ" (ಇಬ್ರಿಯ 12:6).

ಪೌಲನು ತನ್ನ ಹೋರಾಟಗಳು, ಕಷ್ಟಗಳು ಮತ್ತು ಹಿಂಸೆಗಳುದ್ದಕ್ಕೂ ಎದೆಗುಂದಿದವನಾಗಲಿಲ್ಲ (2 ಕೊರಿಂಥ 4:1). ಪೌಲನು ತನ್ನ ಬಾಧೆಗಳ ಮಧ್ಯದಲ್ಲಿ ಹೊಂದಿದ್ದ ಭರವಸೆಯಿಂದ ನಮಗೆ ಬಹಳಷ್ಟು ಆದರಣೆ ಸಿಕ್ಕಬಹುದಾಗಿದೆ: "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ" (ರೋಮಾ 8:18). ನಮಗೆ ವಾಗ್ದಾನ ಮಾಡಲ್ಪಟ್ಟಿರುವ ಮಹಿಮಾಪದವಿ ಏನೆಂದರೆ (1 ಕೊರಿಂಥ 15:51, 52) ಪುನರುತ್ಥಾನದ ವೇಳೆಯಲ್ಲಿ ನಾವು ದೇವರ ಸಾರೂಪ್ಯವುಳ್ಳವರಾಗಿ ಮಾರ್ಪಡುವೆವು ಎಂಬದೆ (ಫಿಲಿಪ್ಪಿ 3:21; 1 ಯೋಹಾನ 3:2). ಆ ಸಮಯದಲ್ಲಿ, ಈ ಜೀವಿತಕಾಲದಲ್ಲಿ ನಾವು ಯೇಸುವಿನ ಸೇವೆಯಲ್ಲಿ ಪಟ್ಟ ಪ್ರಯಾಸಗಳೆಲ್ಲಾ ಪ್ರತಿಫಲದಾಯಕವಾದವುಗಳೆಂದು ಅರಿತುಕೊಳ್ಳುವೆವು. ಪೌಲನು ಹೀಗೆ ಬರೆಯುತ್ತಾನೆ, "ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೆ ಇರೋಣ. ಯಾಕೆಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು" (ಗಲಾತ್ಯ 6:9).

2. *ಪ್ರೀತಿಯ ನಿಮಿತ್ತದಿಂದ ನಿಕಟತೆ.* ಕ್ರೈಸ್ತರಾಗಿ, ನಾವು ಆತ್ಮೀಕವಾಗಿ ನಿಕಟವಾಗಿರಬೇಕು. ಪ್ರೀತಿಯ ಒಂದು ಸಾಮಾನ್ಯ ಬಂಧವು ನಮ್ಮನ್ನು ಒಂದಾಗಿ ಕೂಡಿಸುತ್ತದೆ. ಪೌಲನು ಕ್ರೈಸ್ತರ ನಡುವಿನ ನಿಕಟತೆಯನ್ನು ತೋರ್ಪಡಿಸುವದಕ್ಕೆ "ಹೊಂದಿಕೊಂಡು" ಎಂಬ ಪದವನ್ನು ಬಳಸಿದನು. ಒಂದು ಬಟ್ಟೆಯ ತುಂಡು ಒಂದೇ ದಾರದ ಎಳೆಗಳಿಂದ ಹೆಣೆಯಲ್ಪಟ್ಟದ್ದರಿಂದ ಒಂದಾಗಿ ಹಿಡಿದಿಟ್ಟುಕೊಳ್ಳಲ್ಪಡುವ ರೀತಿಯಲ್ಲಿಯೇ, ಕ್ರೈಸ್ತರು ಪ್ರೀತಿಯಿಂದ ಒಂದುಗೂಡಿಸಲ್ಪಟ್ಟವರಾಗಿರುತ್ತಾರೆ. ನಾವು ಒಂದು ದಾರದ ತುಂಡು

ತಾನೊಂದೇ ನೇತಾಡುತ್ತಿರುವಂತೆ, ವ್ಯಕ್ತಿಗತರಾಗಿ ಪ್ರತ್ಯೇಕವಾಗಿರುವವರಾಗಬಾರದು, ಆದರೆ ನಾವು ಕ್ರೈಸ್ತ ಅನ್ಯೋನ್ಯತೆಯ ವಸ್ತ್ರದಲ್ಲಿಯೇ ಹೆಣೆಯಲ್ಪಟ್ಟವರಾಗಿರತಕ್ಕದ್ದು. ಇಡೀ ಕ್ರೈಸ್ತ ಕುಟುಂಬದ ಭಾಗವಾಗುವಂತೆ ವ್ಯಕ್ತಿಗಳಿಗೆ ಸಹಾಯ ಮಾಡುವ ಗುಣವೇ ಪ್ರೀತಿಯಾಗಿರುತ್ತದೆ.

ಕ್ರೈಸ್ತ ಗುಣದ ಸರ್ವೋಚ್ಚತೆಯೆಂದರೆ ಪ್ರೀತಿಯೇ. ಪ್ರೀತಿಸಬೇಕೆಂಬುದು ಆಜ್ಞೆಯಾಗಿದೆ (ಯೋಹಾನ 13:34). ಅದು ಎಲ್ಲಾ ಸದ್ಗುಣಗಳಲ್ಲಿಯೂ ಅತಿ ಶ್ರೇಷ್ಠವಾದದ್ದೆಂದು ಪ್ರಶಂಸಿಸಲ್ಪಟ್ಟಿದೆ (1 ಕೊರಿಂಥ 13:13). ದೇವರು ಪ್ರೀತಿಸ್ವರೂಪಿಯಾಗಿದ್ದಾನೆ. ಆತನಂತೆ ಇರುವವರಾಗುವಂತೆ ನಾವು ಪ್ರೀತಿಯನ್ನು ಮಾಡತಕ್ಕದ್ದು. ನಾವು ಪ್ರೀತಿ ಮಾಡಲಿಲ್ಲವೆಂದರೆ, ನಾವು ದೇವರನ್ನು ಬಲ್ಲವರಲ್ಲ, ಯಾಕೆಂದರೆ ಆತನು ಪ್ರೀತಿಸ್ವರೂಪಿಯಾಗಿದ್ದನೆ (1 ಯೋಹಾನ 4:8).

3. *ತಿಳುವಳಿಕೆಯ ಪೂರ್ಣ ಭರವಸೆ ನಿಕ್ಷೇಪ.* ಪೌಲನು ತಿಳುವಳಿಕೆಯಿಂದ ಬರುವಂಥ ಶಾರೀರಿಕ ನಿಕ್ಷೇಪವೆಂಬ ಅರ್ಥದಲ್ಲಿ ಹೇಳಲಿಲ್ಲ. ಅಂಥ ನಿಕ್ಷೇಪವನ್ನೇ ಬಹುಪಾಲು ಲೋಕವು ಇಚ್ಛಿಸುತ್ತದೆ. ಜನರು ಹಣಕ್ಕೋಸ್ಕರ ತಮ್ಮ ಆತ್ಮಗಳನ್ನು ಮಾರಿಕೊಂಡಿದ್ದಾರೆ ಮತ್ತು "ಬುದ್ಧಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಿಂದ" ಕೂಡಿರುವ ವಿವಿಧ ಶೋಧನೆಗಳಿಗೆ ಮತ್ತು ಬಲೆಗಳಿಗೆ ನಡಿಸಲ್ಪಟ್ಟಿದ್ದಾರೆ (1 ತಿಮೊಥೆ 6:9). ಹಣದ ಮೇಲಿನ ಪ್ರೀತಿಯ ಕಾರಣದಿಂದ ಅಸಂಖ್ಯಾತ ಜನರು ನಾಶಗೊಳಿಸಲ್ಪಟ್ಟಿದ್ದಾರೆ.

ಕ್ರೈಸ್ತರಾಗಿ ನಾವು ಹೊಂದಿರಬೇಕಾದ ನಿಕ್ಷೇಪವು ಯೇಸುವು ಒದಗಿಸುವ ತಿಳುವಳಿಕೆಯಿಂದ ಬರುವಂಥದ್ದಾಗಿದೆ. ನಿಜವಾದ ನಿಕ್ಷೇಪಗಳಾವವೆಂಬದನ್ನು ಮೋಶೆಯು ಅರ್ಥಮಾಡಿಕೊಂಡನು. ಆತನು "ಐಗುಪ್ತ ದೇಶದ ಸರ್ವೈಶ್ವರ್ಯಕ್ಕಿಂತಲೂ ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಠಭಾಗ್ಯವೆಂದೆಣಿಸಿಕೊಂಡನು; ಯಾಕೆಂದರೆ ಬರುವ ಪ್ರತಿಫಲದ ಮೇಲೆ ಕಣ್ಣಿಟ್ಟಿದ್ದನು" (ಇಬ್ರಿಯ 11:26). ಸೊಲೊಮೋನನು ಹೀಗೆ ಬರೆದನು, "ಧನ ಮಾನ ಜೀವಗಳು ದೀನಭಾವಕ್ಕೂ ಯೆಹೋವನ ಭಯಕ್ಕೂ ಫಲ" (ಜ್ಞಾನೋಕ್ತಿ 22:4)

ಸೊಲೊಮೋನನಿಗೆ ಐಶ್ವರ್ಯದ ಸಮಸ್ಯೆಯ ಅಂತರ್ದೃಷ್ಟಿಯು ದೊರಕಿತು. ಆತನು ಹೀಗೆ ಬರೆಯುತ್ತಾನೆ, "ಬೆಳ್ಳಿಯನ್ನು ಆಶಿಸುವವನಿಗೆ ಎಷ್ಟು ಬೆಳ್ಳಿಯಿಂದಲೂ ತೃಪ್ತಿಯಾಗದು; ಸಮೃದ್ಧಿಯನ್ನು ಬಯಸುತ್ತಲೇ ಇರುವವನಿಗೆ ಆದಾಯವೆಷ್ಟಾದರೂ ಸಾಲದು" (ಪ್ರಸಂಗಿ 5:10). ಜ್ಞಾನ ಮತ್ತು ತಿಳುವಳಿಕೆಯ ಫಲವು "ಭಂಗಾರಕ್ಕಿಂತಲೂ ಹೌದು ಅಪರಂಜಿಗಿಂತಲೂ ಉತ್ತಮ; ನನ್ನ ಮೂಲಕವಾದ ಆದಾಯವು ಚೊಕ್ಕ ಬೆಳ್ಳಿಗಿಂತಲೂ ಅಮೂಲ್ಯವಾಗಿದೆ" (ಜ್ಞಾನೋಕ್ತಿ 8:19). ಐಶ್ವರ್ಯವನ್ನು ಹುಡುಕುವವರಿಗಾಗಿ ಆತನು ಒಂದು ಬುದ್ಧಿವಾದವನ್ನು ನೀಡುತ್ತಾನೆ:

> ದುಡ್ಡಿನಾಸೆಯಿಂದ ದುಡಿಯಬೇಡ;
> ಸ್ವಬುದ್ಧಿಯನ್ನೇ ಆಶ್ರಯಿಸಬೇಡ.
> ನಿನ್ನ ದೃಷ್ಟಿಯು ಧನದ ಮೇಲೆ ಎರಗುತ್ತದೋ?
> ಧನವು ಅಷ್ಟರೊಳಗೆ ಮಾಯವಾಗುವದು;
> ಆಕಾಶದ ಕಡೆಗೆ ಹಾರುವ ಹದ್ದಿನಂತೆ ಅದು ರೆಕ್ಕೆ

ಗಳನ್ನು ಕಟ್ಟಿಕೊಂಡಿದೆ (ಜ್ಞಾನೋಕ್ತಿ 23:4-5).

ಸರಿಯಾದ ಬಯಕೆಯೆಂದರೆ ಐಶ್ವರ್ಯವನ್ನಾಗಲಿ ಬಡತನವನ್ನಾಗಲಿ ಆಶಿಸದಿರುವದೇ. ಇವೆರಡಲ್ಲಿ ಯಾವದಾದರೂ ಸಹ ಒಬ್ಬನನ್ನು ಕರ್ತನಿಂದ ದೂರ ಮಾಡಬಲ್ಲದು (ಜ್ಞಾನೋಕ್ತಿ 30:8, 9). ಬದಲಾಗಿ, ನಾವು ಕ್ರಿಸ್ತನ ಮೂಲಕ ಬರುವಂಥ ಆತ್ಮೀಕ ಐಶ್ವರ್ಯ ಮತ್ತು ನಿಕ್ಷೇಪಗಳನ್ನು ಅಪೇಕ್ಷಿಸಬೇಕು.

4. *ಕ್ರಿಸ್ತನಲ್ಲಿ ಜ್ಞಾನ ಮತ್ತು ತಿಳುವಳಿಕೆ.* ದೇವರ ಜ್ಞಾನ ಮತ್ತು ತಿಳುವಳಿಕೆಗಳು ಕ್ರಿಸ್ತನಲ್ಲಿಯೇ ಪ್ರಕಟಗೊಂಡಿರುತ್ತವೆ. ಲೋಕದ ಜ್ಞಾನದ ಮೂಲಕ ದೇವರನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ ಎಂದು ಪೌಲನು ಬರೆಯುತ್ತಾನೆ (1 ಕೊರಿಂಥ 1:21). ಯೇಸುವನ್ನೂ ಆತನ ಬೋಧನೆಗಳನ್ನೂ ಅರ್ಥಮಾಡಿಕೊಳ್ಳುವದೇ ನಿಜವಾದ ತಿಳುವಳಿಕೆಯಾಗಿದೆ. ಪೌಲನಿಗಿದ್ದ ರೀತಿಯಲ್ಲಿಯೇ, ನಮ್ಮ ಕಳಕಳಿಯು, ಕ್ರಿಸ್ತನಲ್ಲಿ ಸಿಕ್ಕುವ "ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳ" ಬಳಿಗೆ ಜನರನ್ನು ಕರೆ ತರುವದೇ ಆಗಿರತಕ್ಕದ್ದು.

5. *ಕ್ರಿಸ್ತನಿಗೆ ನಂಬಿಗಸ್ತಿಕೆ.* ಕ್ರಿಸ್ತನಲ್ಲಿನ ನಿಕ್ಷೇಪಗಳಿರುವ ಕಾರಣದಿಂದ, ನಾವು ಆತನಿಗೆ ನಂಬಿಗಸ್ತರಾಗಿ ಉಳಿಯತಕ್ಕದ್ದು ಮತ್ತು ಮನುಷ್ಯರ ಬೋಧನೆ ಮತ್ತು ತತ್ವಜ್ಞಾನಗಳೊಳಗೆ ನಡಿಸಲ್ಪಡಕೂಡದು. ಕ್ರಿಸ್ತನಲ್ಲಿಯೇ ಸಕಲ ಜ್ಞಾನ ಮತ್ತು ತಿಳುವಳಿಕೆಯಿರುತ್ತವೆಂದು ಪೌಲನು ಕೊಲೊಸ್ಸೆಯವರಿಗೆ ಹೇಳಿದ್ದಕ್ಕೆ ಕಾರಣವು ಯೇಸುವನ್ನು ದೃಷ್ಟಿಸುವಂತೆ ಮತ್ತು ಮನುಷ್ಯ ಜ್ಞಾನದ ಮೇಲೆ ದೃಷ್ಟಿಯಿಡದಂತೆ ಅವರನ್ನು ಪ್ರೋತ್ಸಾಹ ಪಡಿಸುವದೇ ಆಗಿತ್ತು.

ಆತ್ಮೀಕ ಮಂಡಲದಲ್ಲಿ ನಮಗೆ ಅಗತ್ಯವಿರುವದೆಲ್ಲವೂ ಕ್ರಿಸ್ತನಲ್ಲಿ ಸಿಕ್ಕುತ್ತದೆ. ಎಲ್ಲಾ ಜ್ಞಾನ ಮತ್ತು ತಿಳುವಳಿಕೆಗಳು ಆತನಲ್ಲಿ ದೊರಕುತ್ತವೆ. ನಾವು ಆತನಲ್ಲಿದ್ದವರಾಗಿ ಭಕ್ತಿವೃದ್ಧಿಗೊಳ್ಳತಕ್ಕದ್ದು, ಮತ್ತು ಆತನನ್ನು ಬಿಟ್ಟು ದೂರವಾಗಬಾರದು. ನಾವು ನಿಜವಾಗಿಯೂ ಆತನಲ್ಲಿ ಭಾಗವಾಗುವದಾದರೆ, ಯಾವ ಲೌಕಿಕ ಶಕ್ತಿಯಾಗಲಿ ಅಥವಾ ಬೋಧನೆಯಾಗಲಿ ಆತನೊಂದಿಗಿನ ನಮ್ಮ ಸಂಬಂಧಕ್ಕೆ ಭಂಗವನ್ನುಂಟು ಮಾಡುವದಕ್ಕಾಗದು.

## ನಂಬಿಕೆಯಲ್ಲಿ ಬೆಳೆಯುವದು (2:1-5)

ಯೇಸುವಿನಲ್ಲಿ ಶ್ರೇಷ್ಠ ನಿಕ್ಷೇಪಗಳು ದೊರಕುತ್ತವೆ. ನಮ್ಮ ಗುರಿಯು ಆತನಲ್ಲಿ ದೃಢಗೊಳ್ಳುವದು ಮತ್ತು ಆತನ ಸಂಗಡದ ನಿಕಟ ಸಂಬಂಧದಿಂದಾಗುವ ಪ್ರಯೋಜನಗಳನ್ನು ಆನಂದಿಸುವದು ಆಗಿರಬೇಕು. ಯೇಸುವಿನಲ್ಲಿ ಸಿಕ್ಕುವ ನಿಕ್ಷೇಪಗಳಿಗೆ ಹೋಲಿಸಿದರೆ ಪ್ರಪಂಚದ ಮೂಲತತ್ವಗಳಲ್ಲಿ ನಮಗೆ ಕೊಡುವದಕ್ಕೆ ಏನೂ ಇರುವದಿಲ್ಲ.

ಪೌಲನ ಇತರರ ಹಿತಾಸಕ್ತಿಯನ್ನು ಅಪೇಕ್ಷಿಸಿದನು (ವಚನಗಳು 1, 5). ಆತನು ಸಹೋದರರನ್ನು ವೈಯಕ್ತಿಕ ಆತ್ಮೀಕತೆ ಮತ್ತು ಸಿದ್ಧಾಂತಿಕ ಶುದ್ಧತೆಗೆ ತರುವ ಮೂಲಕ ಕ್ರಿಸ್ತನಲ್ಲಿ ಅವರನ್ನು ಪ್ರವೀಣರನ್ನಾಗಿ ನಿಲ್ಲಿಸಬೇಕೆಂದು ಪ್ರಯತ್ನಿಸಿದನು.

ಪ್ರತಿ ಸಭೆಯ ನಾಯಕನು ಕ್ರಿಸ್ತನ ಹಿಂಬಾಲಕರಲ್ಲಿ ಆತ್ಮೀಕ ಪ್ರವೀಣತೆಯನ್ನು ಕಾಣಬೇಕೆಂಬ ಬಯಕೆಯನ್ನು ಹೊಂದಿರತಕ್ಕದ್ದು. ಎಫೆಸದಲ್ಲಿ, ಪೌಲನು ನಾಯಕರಿಗೆ ಸಭೆಯವರನ್ನು "ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ

ಪ್ರಮಾಣವನ್ನು ಮುಟ್ಟುವ ತನಕ" ನಡಿಸಬೇಕೆಂದು ಬೋಧನೆ ಮಾಡುತ್ತಾನೆ (ಎಫೆಸ 4:13).

ಹುಡುಗರು ಸಾಮಾನ್ಯವಾಗಿ ಎತ್ತರವಾಗಿ ಬೆಳೆಯಬೇಕೆಂದು ಬಯಸುತ್ತಾರೆ. ಕೆಲವು ಸಾರಿ ತಾವು ಬೆಳೆದಿದ್ದೇವೋ ಎಂದು ಪರೀಕ್ಷಿಸುವದಕ್ಕೆ ತಮ್ಮ ಹೆತ್ತವರ ಪಕ್ಕದಲ್ಲಿ ನಿಂತು ಅಳತೆಯನ್ನು ನೋಡುತ್ತಾರೆ. ಒಬ್ಬ ಹುಡುಗನು ತಾನು ಅವನಿಗಿಂತಲೂ ಎತ್ತರದಲ್ಲಿದ್ದೇನೆಂದು ಹೆಮ್ಮೆಯಿಂದ ತೋರ್ಪಡಿಸುವದಕ್ಕಾಗಿ ಕುಳ್ಳಗಿರುವ ತನ್ನ ತಮ್ಮನ ಪಕ್ಕದಲ್ಲಿ ನಿಂತುಕೊಳ್ಳಬಹುದು. ಮತ್ತೊಬ್ಬನು ತಾನು ಆ ವ್ಯಕ್ತಿಯ ಎತ್ತರಕ್ಕೆ ಬರಲು ಇನ್ನು ಎಷ್ಟು ಎತ್ತರ ಬೆಳೆಯಬೇಕೆಂದು ಅಳತೆ ಮಾಡುವದಕ್ಕಾಗಿ ತನಗಿಂತ ಎತ್ತರವಿರುವವನ ಪಕ್ಕದಲ್ಲಿ ನಿಂತು ಪರೀಕ್ಷಿಸಬಹುದಾಗಿದೆ.

ತಾವು ಮತ್ತೊಬ್ಬರಿಗಿಂತ ಶ್ರೇಷ್ಠರೆಂದು ಬಡಾಯಿ ಕೊಚ್ಚಿಕೊಳ್ಳುವದಕ್ಕಾಗಿ ತಮ್ಮನ್ನು ಬೇರೆಯವರೊಂದಿಗೆ ಹೋಲಿಕೆ ಮಾಡಿಕೊಳ್ಳಬಾರದೆಂದು ನಾಯಕರು ಕ್ರೈಸ್ತರಿಗೆ ಪ್ರೋತ್ಸಾಹ ಮಾಡಬಹುದು. ಅವರು ಯೇಸುವಿನ ಸಾರೂಪ್ಯವುಳ್ಳವರಾಗುವ ದಿಕ್ಕಿನಲ್ಲಿ ಬೆಳೆಯುವಂತಾಗಲು ಯೇಸುವಿನೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವಂತೆ ಅವರು ಸಹೋದರರನ್ನು ತರಬೇತುಗೊಳಿಸಬಹುದು.

ಪೌಲನ ಮನೋಭಾವವು ಏನಾಗಿತ್ತೆಂದರೆ ಕ್ರೈಸ್ತರು ಬೆಳೆಯುವಂತೆ ಸಹಾಯ ಮಾಡುವದಕ್ಕಾಗಿ ತನ್ನನ್ನು ಯಜ್ಞವಾಗಿ ಅರ್ಪಿಸಿಕೊಳ್ಳುವದಕ್ಕೂ ಸಂತೋಷ ಪಡುವವನಾಗಿದ್ದನು (ಫಿಲಿಪ್ಪಿ 2:17). ಕ್ರೈಸ್ತ ನಾಯಕರು ಸಭೆಯವರ ಒಳಿತಿಗಾಗಿ ತಮ್ಮನ್ನು ಅರ್ಪಿಸಿಕೊಳ್ಳುವದಕ್ಕೆ ಮನಸ್ಸುಳ್ಳವರಾಗಿರತಕ್ಕದ್ದು.

ಪೌಲನು ಪ್ರೀತಿಯಿಂದ ಹೊಂದಿಕೊಂಡಿರುವದನ್ನು ಮತ್ತು ಆತ್ಮೀಕ ಗ್ರಹಿಕೆಯನ್ನು ಬಯಸಿದನು (ವ. 2). ಆತನ ಪ್ರಮುಖ ಗುರಿಯು ಸಹೋದರರನ್ನು ನಿಕಟವಾಗಿ ಹೊಂದಿಕೊಂಡಿರುವಂತೆ ಮಾಡುವ ಪ್ರೀತಿಯನ್ನು ಕ್ರೈಸ್ತ ಸಮುದಾಯದಲ್ಲಿ ಬೆಳೆಯುವಂತೆ ಮಾಡುವದೇ ಆಗಿತ್ತು. ಪ್ರೀತಿಯು "ಹಿಡಿದುಕೊಳ್ಳಲ್ಪಡಬಲ್ಲದು" ಹಾಗೂ ಕಲಿಸಲ್ಪಡಬಲ್ಲದ್ದು ಸಹ ಆಗಿರುತ್ತದೆ. ಅಪೊಸ್ತಲರು ಯೇಸುವಿನ ಜೊತೆಯಲ್ಲಿ ತಮಗಿದ್ದ ಸಹವಾಸದ ಮೂಲಕ ಪ್ರೀತಿಯ ಬಗ್ಗೆ ಕಲಿತುಕೊಂಡರು (ಯೋಹಾನ 13:34). ಪೌಲನು ತನ್ನ ಜೊತೆ ಕ್ರೈಸ್ತರನ್ನು ಪ್ರಾಮಾಣಿಕವಾಗಿ ಪ್ರೀತಿಸಿದನು (1 ಕೊರಿಂಥ 10:14; 15:58; 16:24; 2 ಕೊರಿಂಥ 2:4). ಪೌಲನು ಯೇಸುವನ್ನು ಅನುಸರಿಸಿದಂತೆಯೇ ಶಿಷ್ಯರು ಪೌಲನನ್ನು ಅನುಸರಿಸುವ ಮೂಲಕ ಪೌಲನಿಂದ ಪ್ರೀತಿಯನ್ನು ಕಲಿತುಕೊಳ್ಳುವ ಅವಕಾಶವನ್ನು ಹೊಂದಿದ್ದರು (1 ಕೊರಿಂಥ 11:1). ದಾವೀದನ ಮೇಲೆ ತನಗಿದ್ದ ಪ್ರೀತಿಯ ನಿಮಿತ್ತದಿಂದ ಯೋನಾತಾನನು ಮಾಡುವದಕ್ಕೆ ಸಿದ್ಧನಿದ್ದಂಥ ತ್ಯಾಗವು ಕ್ರೈಸ್ತರು ಒಬ್ಬರನ್ನೊಬ್ಬರು ಹೇಗೆ ಪ್ರೀತಿಸಬೇಕೆಂಬುದಕ್ಕೆ ಒಂದು ಉತ್ತಮ ಉದಾಹರಣೆಯಾಗಿರುತ್ತದೆ.

ಯೇಸುವಿನಿಂದ ಕಲಿತುಕೊಳ್ಳಲು ಹೆಚ್ಚು ಸಮಯವನ್ನು ಕಳೆಯತಕ್ಕದ್ದು. ಜ್ಞಾನ ಮತ್ತು ತಿಳುವಳಿಕೆಗಳ ನಿಜವಾದ ಮೂಲವು ಆತನೇ ಆಗಿದ್ದಾನೆ (ವಚನಗಳು 3, 4).

### ಯೇಸುವನ್ನು ಮಾತ್ರವೇ ದೃಷ್ಟಿಸುವದು (2:6, 7)

ಕ್ರೈಸ್ತರು ಯೇಸುವಿನಲ್ಲಿ ಮಾತ್ರವೇ ನಡೆಯತಕ್ಕದ್ದು (ವ. 6), ಯಾಕೆಂದರೆ ತಂದೆಯ ಬಳಿಗೆ ಹೋಗುವದಕ್ಕೆ ಏಕೈಕ ಮಾರ್ಗವು ಆತನೇ (ಯೋಹಾನ 14:6; ಅಪೊಸ್ತಲರ ಕೃತ್ಯಗಳು 4:12). ಆತನಲ್ಲಿದ್ದವರಾಗಿ ನಡೆದುಕೊಳ್ಳುವದೆಂದರೆ ಆತನು ತೋರಿಸಿರುವ

ಜೀವನದ ಮಾದರಿಯನ್ನು ಅನುಸರಿಸುವದು ಎಂದರ್ಥವಾಗಿದೆ (1 ಯೋಹಾನ 2:6). ಕ್ರೈಸ್ತರಾಗಿ ನಮಗಿರುವ ಗುರಿಯು ನಮ್ಮ ಜೀವಿತಗಳನ್ನು ಯೇಸುವಿನ ಜೀವನ ಶೈಲಿಯೊಂದಿಗೆ ಮೀತಿಗೊಳಿಸಿಕೊಳ್ಳುವದೇ. ಆ ರೀತಿಯಲ್ಲಿ ಮಾಡದವರು ಯೇಸುವಿನಲ್ಲಿದ್ದವರಾಗಿ ನಡೆದುಕೊಳ್ಳದವರಾಗಿದ್ದಾರೆ.

ನಾವು ಯೇಸುವಿನಲ್ಲಿ ದೃಢವಾಗಿ ಬೇರೂರಿದವರಾಗಬೇಕು (ವ. 7). ಒಂದು ಮರಕ್ಕೆ ಬಲವಾದ, ಆಳವಾದಂಥ ಬೇರುಗಳಿದ್ದಲ್ಲಿ ಅದು ಘೋರವಾದ ಬಿರುಗಾಳಿಯಲ್ಲಿಯೂ ದೃಢವಾಗಿ ನಿಲ್ಲುವದು. ದೇವರ ವಾಕ್ಯವನ್ನು ಧ್ಯಾನಿಸುವವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನೆಂಬದಾಗಿ ದಾವೀದನು ಕಲಿಸುತ್ತಾನೆ (ಕೀರ್ತನೆ 1:3). ನಾವು ನೈತಿಕ, ಸಿದ್ಧಾಂತಿಕ, ಅಥವಾ ಜೀವಿತದ ಯಾವದೇ ಅಂಶಗಳಲ್ಲಿ ಯೇಸುವಿನಿಂದ ಬೇರ್ಪಡದ ರೀತಿಯಲ್ಲಿ ಆತನೊಂದಿಗೆ ಹಾಸುಹೊಕ್ಕಾಗಿ ಇರತಕ್ಕದ್ದು (1 ಕೊರಿಂಥ 15:58). ಸೈತಾನನು ಲೋಕದ ಮುಖಾಂತರವಾಗಿ, ಯೇಸುವಿನೊಂದಿಗೆ ನಮಗಿರುವ ಸ್ಥಿರವಾದ ಸಂಬಂಧದಿಂದ ದೂರಕ್ಕೆ ಎಳೆಯಲಿ ನಿರಂತರವಾಗಿ ಪ್ರಯತ್ನಿಸುತ್ತಲೇ ಇರುತ್ತಾನೆ (1 ಪೇತ್ರ 5:8). ಲೋಕವನ್ನಾಗಲಿ ಅಥವಾ ಲೋಕದ ಸಂಗತಿಗಳನ್ನಾಗಲಿ ಪ್ರೀತಿಸಬೇಡಿರಿ ಎಂದು ಯೋಹಾನನು ಕ್ರಿಸ್ತನ ಹಿಂಬಾಲಕರಿಗೆ ಬುದ್ಧಿವಾದ ಹೇಳುತ್ತಾನೆ (1 ಯೋಹಾನ 2:15-17).

---

## ಅಡಿಟಿಪ್ಪಣಿಗಳು

[1]ಫಿಲಿಪ್ಪಿ 1:30; 1 ಥೆಸಲೋನಿಕ 2:2; 1 ತಿಮೊಥೆ 6:12; 2 ತಿಮೊಥೆ 4:7; ಮತ್ತು ಇಬ್ರಿಯ 12:1ರಲ್ಲಿ ಇದೇ ಗ್ರೀಕ್ ಪದವು ಕಾಣಿಸಿಕೊಳ್ಳುತ್ತದೆ. [2]ಉದಾಹರಣೆಗಾಗಿ, ನೋಡಿರಿ, ಅಪೊಸ್ತಲರ ಕೃತ್ಯಗಳು 20:31; 2 ಕೊರಿಂಥ 2:4; ಗಲಾತ್ಯ 4:19; ಫಿಲಿಪ್ಪಿ 1:18; 1 ಥೆಸಲೋನಿಕ 2:8. [3]ಕೆಲವು ಹಸ್ತಪ್ರತಿಗಳು "ಮತ್ತು ಹಿರಿಯಾಪೊಲಿಯಲ್ಲಿರುವವರಿಗೋಸ್ಕರ" ಎಂದು ಸೇರ್ಪಡೆಗೊಳಿಸುತ್ತವೆ. [4]1 ಸಮುವೇಲ 16:7; 1 ಅರಸು 8:39; ಲೂಕ 16:15; ಅಪೊಸ್ತಲರ ಕೃತ್ಯಗಳು 1:24; ರೋಮಾ 8:27; ಪ್ರಕಟನೆ 2:23. [5]Robert G. Bratcher and Eugene A. Nida, *A Translators Handbook on Paul's Letters to the Colossians and to Philemon,* Helps for Translators (New York: United Bible Societies, 1977), 46. [6]H. C. G. Moule, *The Epistles to the Colossians and to Philemon,* The Cambridge Bible for Schools and Colleges (Cambridge: University Press, 1893; reprint, 1902), 97. [7]Bratcher and Nida, 48. [8]ನೋಡಿರಿ 1 ಕೊರಿಂಥ 11:23; 15:1, 3; ಗಲಾತ್ಯ 1:9, 12; ಫಿಲಿಪ್ಪಿ 4:9; 1 ಥೆಸಲೋನಿಕ 2:13; 4:1; 2 ಥೆಸಲೋನಿಕ 3:6. [9]A. T. Robertson, *Paul and the Intellectuals: The Epistle to the Colossians*, rev. and ed. W. C. Strickland (Nashville: Broadman Press, 1959), 76. [10]R. C. Lucas, *The Message of Colossians and Philemon: Fullness and Freedom*, The Bible Speaks Today (Downers Grove, Ill.: InterVarsity Press, 1980), 93.